# 1:3-8

# ಪೌಲನು ಕೊಲೊಸ್ಸೆಯವರಿಗಾಗಿ ಸ್ತೋತ್ರ ಮಾಡಿದ್ದು

ವಂದನೆಗಳನ್ನು ಹೇಳಿದ ಬಳಿಕ, ಅವರ ನಂಬಿಕೆ, ಪ್ರೀತಿ, ಮತ್ತು ನಿರೀಕ್ಷೆಗಳ ನಿಮಿತ್ತದಿಂದ ಸ್ತೋತ್ರ ಮಾಡುವವನಾಗಿ ಪ್ರಾರ್ಥಿಸುತ್ತಿದ್ದನೆಂಬದಾಗಿ ಪೌಲನು ಕೊಲೊಸ್ಸೆಯವರಿಗೆ ತಿಳಿಯಪಡಿಸುತ್ತಾನೆ. ಸುವಾರ್ತೆಯ ಸತ್ಯವನ್ನು ತಿಳಿದವರಾಗಿ, ಅವರು ಯೇಸುವಿಗೋಸ್ಕರ ಫಲ ಕೊಡುವದಕ್ಕೆ ಮತ್ತು ನಿರಂತರ ಫಲ ಕೊಡುವದಕ್ಕೆ ಆರಂಭಿಸಿದ್ದರು. ಪೌಲನ ಪ್ರಿಯ ಕ್ರಿಸ್ತನಿಗಾಗಿ ಜೊತೆ ಕೆಲಸಗಾರನಾದ ಎಪಫ್ರನು ಅವರಿಗೆ ಬೋಧಿಸಿದ್ದನು ಮತ್ತು ಅವರ ಪ್ರೀತಿಯ ಸೇವೆಯ ಬಗ್ಗೆ ಆತನಿಗೆ ಮಾಹಿತಿ ಕೊಟ್ಟಿದ್ದನು.

ಪೌಲನು ಯಾವ ಸಂಗತಿಗಳಿಗಾಗಿ ಸ್ತೋತ್ರ ಮಾಡಿದನೋ ಆ ಸಂಗತಿಗಳನ್ನು 4ರಿಂದ 8 ವಚನಗಳಲ್ಲಿ ಪಟ್ಟಿ ಮಾಡಲಾಗಿದೆ. ಆಥನು ಸ್ವಭಾವಕ್ಕನುಗುಣವಾಗಿಯೇ ತನ್ನ ಪತ್ರಿಕೆಗಳಲ್ಲಿ ವಂದನೆ ಹೇಳುವಿಕೆಯನ್ನು ಒಂದು ಸ್ತುತಿ ಮತ್ತು ಸ್ತೋತ್ರಾರ್ಪಣೆಯಿಂದ ಆರಂಭಿಸುತ್ತಿದ್ದನು ಮತ್ತು ನಂತರ ತಾನು ಪ್ರಶಂಸಿಸಬಹುದಾದ ಗುಣಗಳನ್ನು ಅಥವಾ ಕೃತ್ಯಗಳನ್ನು ಉಲ್ಲೇಖಿಸುತ್ತಿದ್ದನು. ಇವುಗಳ ನಂತರ ಕೆಲವು ಸಾರಿ ವಾಚಕರ ಭಕ್ತಿವೃದ್ಧಿಗೋಸ್ಕರ ಖಂಡನೆ, ಗದರಿಕೆ, ಮತ್ತು ಬೋಧನೆಗಳನ್ನು ನೀಡುತ್ತಿದ್ದನು.

## ಒಂದು ಸ್ತೋತ್ರದ ಪ್ರಾರ್ಥನೆ (1:3-5)

**3-5ಕ್ರಿಸ್ತ ಯೇಸುವಿನಲ್ಲಿ ನೀವು ಇಟ್ಟ ನಂಬಿಕೆಯ ವಿಷಯವಾಗಿಯೂ ದೇವಜನರ ಮೇಲಿರುವ ನಿಮ್ಮ ಪ್ರೀತಿಯ ವಿಷಯವಾಗಿಯೂ ನಾವು ಕೇಳಿ ಪರಲೋಕದಲ್ಲಿ ನಿಮಗೋಸ್ಕರ ಸಿದ್ಧವಾಗಿರುವ ಮಹಾಪದವಿಯನ್ನು ನೆನಸುತ್ತಾ ನಾವು ಪ್ರಾರ್ಥನೆ ಮಾಡುವಾಗಲೆಲ್ಲಾ ನಿಮ್ಮ ನಿಮಿತ್ತವಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾಗಿರುವ ದೇವರಿಗೆ ಸ್ತೋತ್ರ ಮಾಡುತ್ತೇವೆ. ನೀವು ಆ ಪದವಿಯನ್ನು ಕುರಿತು ನಿಮ್ಮ ಬಳಿಗೆ ಬಂದಿರುವ ಸುವಾರ್ತೆಯ ಸತ್ಯವಾಕ್ಯದಿಂದ ಮೊದಲೇ ಕೇಳಿದಿರಿ.**

**"ನಾವು . . . ದೇವರಿಗೆ ಸ್ತೋತ್ರ ಮಾಡುತ್ತೇವೆ"**

**ನಾವು** ಎಂಬುದು ಪೌಲ ಮತ್ತು ತಿಮೊಥೆಯರನ್ನು ಸೂಚಿಸಬಹುದಾಗಿದೆ ಅಥವಾ ಅದು

ಕೇವಲ ಇತರ ಪತ್ರಿಕೆಗಳಲ್ಲಿ ಪೌಲನು ಬಳಸಿರುವ ಸಂಪಾದಕೀಯ "ನಾವು" ಎಂದಾಗಿರಬಹುದಾಗಿದೆ (1 ಕೊರಿಂಥ 2:6, 7; 2 ಕೊರಿಂಥ 4:1, 2). ಆತನು ಪತ್ರಿಕೆಯಲ್ಲಿ "ನಾನು" ಎಂದು ಬಳಸಿರುವದು (ಉದಾಹರಣೆಗಾಗಿ ಕೊಲೊಸ್ಸೆ 1:23, 24, 25, 29; 2:1, 5) ಕೊಲೊಸ್ಸೆಯವರಿಗೆ ಪತ್ರಿಕೆಯನ್ನು ರಚಿಸುತ್ತಿರುವ ವ್ಯಕ್ತಿಯು ಪೌಲನೇ ಹೊರತು ತಿಮೊಥೆಯನಲ್ಲ ಎಂಬುದನ್ನು ಸೂಚಿಸುತ್ತಾನೆ. ಆತನ "ಇದು ಪೌಲನೆಂಬ ನಾನು ಸ್ವಂತ ಕೈಯಿಂದ ಬರೆದ ವಂದನೆ" (ಕೊಲೊಸ್ಸೆ 4:18) ಎಂಬ ಹೇಳಿಕೆಯು ಖಚಿತವಾಗಿ ತೋರಿಸುವದೇನೆಂದರೆ ಈ ಪತ್ರಿಕೆಯ ಲೇಖಕನು ಆತನೇ ಆಗಿದ್ದನು ಎಂಬದೆ.

ಪೌಲನು ಕೊಲೊಸ್ಸೆಯವರಿಗಾಗಿ ಮಾಡಿದ ಪ್ರಾರ್ಥನೆಯು ಕೇವಲ ಅವರ ಪರವಾಗಿ ಆಶೀರ್ವಾದಗಳಿಗೋಸ್ಕರ ಒಂದು ವಿಜ್ಞಾಪನೆ ಮತ್ತು ಮನವಿ ಮಾತ್ರವೇ ಆಗಿರಲಿಲ್ಲ. ಆತನ ಪ್ರಾರ್ಥನೆಯಲ್ಲಿ ಕೃತಜ್ಞತೆ ಹಾಗೂ ಸ್ತೋತ್ರಾರ್ಪಣೆ ಸಹ ಸೇರಿದ್ದವು.

ಭಾವಿ ವಾಚಕರ ವಿಷಯದಲ್ಲಿ **ಸ್ತೋತ್ರ** (εὐχαριστέω, *eucharisteō*) ಮಾಡುವಿಕೆಯು ಪೌಲನ ಪತ್ರಿಕೆಗಳಲ್ಲಿ ನಾಲ್ಕು ಪತ್ರಿಕೆಗಳನ್ನು ಹೊರತು ಪಡಿಸಿ ಮಿಕ್ಕ ಎಲ್ಲಾ ಪತ್ರಿಕೆಗಳಲ್ಲಿ ಇರುತ್ತದೆ (ಗಲಾತ್ಯ, 2 ಕೊರಂಥ, 1 ತಿಮೊಥೆ, ಮತ್ತು ತೀತನಿಗೆ).[1] ಇದರಿಂದ ತೋರುವದೇನೆಂದರೆ ಅಂಥ ಹೇಳಿಕೆಗಳು ಎಲ್ಲಿ ಅಗತ್ಯವಿದ್ದವೋ ಅಲ್ಲಿ ಮಾತ್ರವೇ ಪೌಲನು ಸ್ತೋತ್ರವನ್ನು ವ್ಯಕ್ತಪಡಿಸಿದನು ಎಂಬದೆ. ಆತನು ಮತ್ತು ತಿಮೊಥೆಯನು ದೇವರೊಂದಿಗೆ ಅವರ ಬಗ್ಗೆ ಮಾತಾಡುವಾಗ ತಮ್ಮ ಹೃದಯಗಳಲ್ಲಿ ಕೃತಜ್ಞತೆಯನ್ನು ಹೊಂದಿದ್ದರೆಂಬದನ್ನು ಕೊಲೊಸ್ಸೆಯವರಿಗೆ ಪೌಲನು ಗೊತ್ತಾಗುವಂತೆ ಮಾಡುತ್ತಾನೆ. ಪೌಲನು ಎಪಫ್ರನಿಂದ ಪಡೆದುಕೊಂಡಿದ್ದ ಉತ್ತಮ ವರದಿಯಿಂದಾಗಿ ಆತನಲ್ಲಿ ಸ್ತೋತ್ರಗಳು ಉಂಟಾದವು (ಕೊಲೊಸ್ಸೆ 1:7, 8). ಆತನು ಕ್ರಿಸ್ತನ ಸೇವೆಗೆ ಹೊಂದಿದ್ದ ಸಮರ್ಪಣೆಯು ಆತನ ಜೊತೆ ಕ್ರೈಸ್ತರ ಜೀವಿತಗಳಿಗೆ ಅನುಗುಣವಾಗಿ ಆತನನ್ನು ಸಂತೋಷಿಸುವಂತೆ ಅಥವಾ ದುಃಖಪಡುವಂತೆ ಮಾಡುತ್ತಿತ್ತು (2 ಕೊರಿಂಥ 7:7, 8; 1 ಥೆಸಲೋನಿಕ 3:9). ಆತನು ಕೃತಜ್ಞತೆಯನ್ನು **ದೇವರಿಗೆ** ತೋರಿಸಿದ್ದು ಸರಿಯಾಗಿಯೇ ಇತ್ತು, ಯಾಕೆಂದರೆ ಎಲ್ಲಾ ಆತ್ಮೀಕ ಆಶೀರ್ವಾದಗಳ ಮೂಲವೂ ಆತನೇ ಆಗಿದ್ದನು (ಎಫೆಸ 1:3) ಮತ್ತು ಕೊಲೊಸ್ಸೆಯವರನ್ನು ಆಶೀರ್ವದಿಸಿದ್ದನು.

## "ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾದ"

ಪೌಲನು ದೇವರ ಸಂಗಡ ಯೇಸುವಿಗಿದ್ದ ಸಂಬಂಧವನ್ನು ಬಣ್ಣಿಸುವದಕ್ಕೆ "ತಂದೆಯಾದ" ಎಂಬ ಪದವನ್ನು ಬಳಸಿದನು (ರೋಮಾ 15:6; 2 ಕೊರಿಂಥ 1:3; 11:31). ಯೇಸು ದೇವರನ್ನು "ನನ್ನ ತಂದೆ" ಎಂದು ಕರೆದನು (ನೋಡಿರಿ, ಉದಾಹರಣೆಗಾಗಿ, ಮತ್ತಾಯ 7:21; 10:33; ಲೂಕ 10:22; 24:49). ಆತನು ಮಗ್ದಲದ ಮರಿಯಳಿಗೆ ತಾನು "ನನ್ನ ತಂದೆಯೂ" ಮತ್ತು "ನನ್ನ ದೇವರೂ" ಆಗಿರುವಾತನ ಬಳಿಗೆ ಏರಿ ಹೋಗುತ್ತೇನೆಂದು ಹೇಳಿದನು (ಯೋಹಾನ 20:17).

**ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾದ** ಎಂಬುದನ್ನು ಒಂದು ಜೈವಿಕ ಮೂಲ ಎಂಬರ್ಥದಲ್ಲಿ, ತಂದೆಯು ಹುಟ್ಟಿಸುವಿಕೆಯಿಂದ ಯೇಸು ಮಗನಾಗಿದ್ದಾನೆ ಎಂಬರ್ಥದಲ್ಲಿ ಯೋಚಿಸಬಾರದು. ಪೌಲನು "ತಂದೆಯಾದ" ಎಂಬದಾಗಿ ಬಳಸುವದು ಹಳೆಯ ಒಡಂಬಡಿಕೆಯ ವಿಚಾರವನ್ನು ಪ್ರತಿಫಲಿಸುತ್ತದೆ. ದೇವರು ಹೀಗೆ ಹೇಳಿದನು, "ನಾನು

ನಿಮ್ಮನ್ನು ಸೇರಿಸಿಕೊಂಡು ನಿಮಗೆ ತಂದೆಯಾಗಿರುವೆನು; ನೀವು ನನಗೆ ಕುಮಾರ ಕುಮಾರಿಯರು ಆಗಿರುವಿರಿ" (2 ಕೊರಿಂಥ 6:18; ನೋಡಿರಿ 2 ಸಮುವೇಲ 7:14; 1 ಪೂರ್ವಕಾಲವೃತ್ತಾಂತ 17:13). ಇಬ್ರಿಯ 1:5ನೇ ವಚನವು ಕೀರ್ತನೆ 2:7ನ್ನು ಉಲ್ಲೇಖಿಸುವ ಮೂಲಕ ಈ ವಿಚಾರವನ್ನು ಯೇಸುವಿಗೆ ಅನ್ವಯಿಸುತ್ತದೆ.

"ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾದ" ಎಂಬದರಲ್ಲಿ ಮೂಲೋತ್ಪತ್ತಿ ಬದಲಾಗಿ ಸಂಬಂಧವು ಪ್ರತಿಫಲನವಾಗಿರುತ್ತದೆ. ಒಂದು ಅರ್ಥದಲ್ಲಿ, ಪವಿತ್ರಾತ್ಮನು ಶಕ್ತಿಯ ನೆರಳಿನಿಂದ ಮರಿಯಳನ್ನು ಆವರಿಸಿಕೊಂಡು ಆಕೆಯು ಗರ್ಭಧರಿಸುವಂತೆ ಮಾಡಿದ್ದರ ಫಲಿತವಾಗಿ ಶಾರೀರಕ ದೇಹವನ್ನು ಯೇಸು ಪಡೆದ್ದರಿಂದ ಆತನು ದೇವರ ಮಗನು ಎಂದು ಕರೆಯಲ್ಪಟ್ಟಿದ್ದಾನೆ (ಮತ್ತಾಯ 1:18; ಲೂಕ 1:35, 36). ಇದು ಆತನ ಶಾರೀರಿಕ ಜನನವನ್ನು ಸಾಧ್ಯವಾಗಿಸಿತು. ಆತನು ತನ್ನ ಜನನದ ಮುಂಚೆಯೇ ಅಸ್ತಿತ್ವದಲ್ಲಿದ್ದನು, ಆತನು ಜಗದುತ್ಪತ್ತಿಗೆ ಮುನ್ನವೇ (ಯೋಹಾನ 17:5), ಆದಿಯಲ್ಲಿ ತಂದೆಯೊಂದಿಗೆ ಇದ್ದನು (ಯೋಹಾನ 1:1). ಸಮಸ್ತವು ಆತನಿಂದ ಸೃಷ್ಟಿಸಲ್ಪಟ್ಟಿತು (ಯೋಹಾನ 1:3, 10; ಕೊಲೊಸ್ಸೆ 1:16). ಯೇಸುವಿನ ನಿತ್ಯವಾದ, ದೈವಿಕವಾದ, ಆತ್ಮೀಕ ಸ್ವಭಾವವು ತಂದೆಯ ಕಾರಣದಿಂದ ಹುಟ್ಟಿದ್ದಲ್ಲ. ಆತನು ಅನಾದಿ ಕಾಲದಿಂದಲೂ ಇದ್ದವನಾಗಿದ್ದಾನೆ (ಮೀಕ 5:2).

ಯೇಸು ತಂದೆಯೊಂದಿಗೆ ಹೊಂದಿರುವ ಸಹವಾಸದ ಕಾರಣದಿಂದ "ದೇವಕುಮಾರನು" ಎಂದು ಕರೆಯಲ್ಪಟ್ಟಿದ್ದಾನೆ. ಅಂಥ ಪರಿಭಾಷೆಯು ಯೇಸು ತಂದೆಯ ಸಂಗಡ ಹೊಂದಿರುವ ಆಪ್ತವಾದ, ಕನಿಕರವುಳ್ಳ ಪ್ರೀತಿಯ ಸಂಬಂಧವನ್ನು ಬಯಲುಪಡಿಸುತ್ತದೆ (ಯೋಹಾನ 15:9). ಈ ಭಾವನೆಯು "ಏಕಪುತ್ರನೂ ಸ್ವತಃ ದೇವರೂ ಆಗಿದ್ದು ತಂದೆಯ ಎದೆಯಲ್ಲಿದ್ದಾನೋ ಆತನೇ" ಎಂಬ ಮಾತುಗಳಲ್ಲಿ ವ್ಯಕ್ತಗೊಳಿಸಲ್ಪಟ್ಟಿದೆ (ಯೋಹಾನ 1:18).

"ಯೇಸು ಕ್ರಿಸ್ತನ ತಂದೆಯಾದ" ಎಂಬ ಹೇಳಿಕೆಯು ಸೂಚಿಸುವದೇನೆಂದರೆ ಅವರಿಬ್ಬರೂ ಎರಡು ಪ್ರತ್ಯೇಕ ಜೀವಿಗಳು ಎಂಬದೆ. ತಂದೆ ಮತ್ತು ಮಗನಾದ ಯೇಸು ಒಂದಾಗಿದ್ದಾರೆ (ಯೋಹಾನ 10:30), ಆದರೆ ಅವರಿಬ್ಬರೂ ಒಂದೇ ವ್ಯಕ್ತಿಯಲ್ಲ. ಮಗನು ತೀರ್ಪು ಮಾಡುವನು ಆದರೆ ತಂದೆಯುತೀರ್ಪು ಮಾಡುವದಿಲ್ಲ (ಯೋಹಾನ 5:22). ಯೇಸುವು ಯಾವಾಗ ಹಿಂದಿರುಗಿ ಬರುವನೆಂಬದುದು ತಂದೆಗೆ ತಿಳಿದದೆ, ಆದರೆ ತನಗೆ ತಿಳಿಯದು ಎಂದು ಮಗನು ಹೇಳಿದ್ದನು (ಮಾರ್ಕ 13:32). ಯೇಸು ಈಗ ಒಬ್ಬನನ್ನು ಹೊರತು ಪಡಿಸಿ – ತಂದೆ, ಆತನೇ ಎಲ್ಲವನ್ನು ಆತನಿಗೆ ಅಧೀನಪಡಿಸಿನು – ಎಲ್ಲದರ ಮೇಲೆ ಒಡೆಯನಾಗಿದ್ದಾನೆ (1 ಕೊರಿಂಥ 15:27, 28).

ತಂದೆ ಮತ್ತು ಮಗನ ನಡುವಿನ ಏಕತ್ವವು ಕೇವಲ ಆತ್ಮೀಕ ಜೀವಿಗಳ ಮಧ್ಯದಲ್ಲಿ ಇರಬಲ್ಲಂಥ ಏಕತ್ವವಾಗಿದೆ. ಶಾರೀರಿಕ ಜೀವಿಗಳು ಅಕ್ಷರಶಃ ಒಂದಾಗಿರುವದಕ್ಕೆ ಸಾಧ್ಯವಿಲ್ಲ, ಯಾಕೆಂದರೆ ಶಾರೀರಿಕ ದೇಹಗಳು ಯಾವಾಗಲೂ ಪ್ರತ್ಯೇಕಸ್ವರೂಪವಾಗಿ ಬೇರೆ ಬೇರೆ ಇರುತ್ತವೆ. ಆತ್ಮೀಕ ಜೀವಿಗಳು ಹೇಗೆ ರಚಿತವಾಗಿರುತ್ತವೆಂಬುದು ತಿಳಿಯದ ವಿಚಾರವಾದ್ದರಿಂದ, ಅವುಗಳು ಹೇಗೆ ಒಂದೇ ಆಗಿದ್ದು ಅದೇ ಸಮಯದಲ್ಲಿ ಬೇರೆ ಬೇರೆ ಇರಬಲ್ಲವೆಂಬುದನ್ನು ನಮಗೆ ಅರ್ಥಮಾಡಿಕೊಳ್ಳಲು ಆಗುವದಿಲ್ಲ. ಶಾರೀರಿಕ ಜೀವಿಗಳು ಒಬ್ಬರೊಳಗೊಬ್ಬರು ಇರಲಾರರು, ಹೀಗಿದ್ದರೂ ಯೇಸು ತಂದೆಯಲ್ಲಿಯೂ ತಂದೆಯು

ಯೇಸುವಿನಲ್ಲಿಯೂ ಇದ್ದಾರೆ: “ನನ್ನಲ್ಲಿ ತಂದೆಯು ಇದ್ದಾನೆಂತಲೂ ತಂದೆಯಲ್ಲಿ ನಾನು ಇದ್ದೇನೆಂದತಲೂ . . .” (ಯೋಹಾನ 10:38b); “ನಾನು ತಂದೆಯಲ್ಲಿದ್ದೇನೆ, ತಂದೆಯು ನನ್ನಲ್ಲಿ ಇದ್ದಾನೆ” (ಯೋಹಾನ 14:10, 11, 20). ಅವರು ಒಂದಾಗಿರಬಲ್ಲರು (ಯೋಹಾನ 10:30) ಮತ್ತು ಆದಾಗ್ಯೂ ಇಬ್ಬರಾಗಿ ಇರುವರು (ಯೋಹಾನ 8:17, 18) ಯಾಕೆಂದರೆ ಅವರು ಆತ್ಮಗಳಾಗಿದ್ದಾರೆ ಮತ್ತು ಅವರು ಶಾರೀರಿಕ ಜೀವಿಗಳಲ್ಲ.

“ತಂದೆಯಾದ” ಎಂಬುದರಲ್ಲಿ ಗೌರವದ ಮತ್ತು ಮನಃಪೂರ್ವಕ ವಿಧೇಯತೆಯ ವಿಚಾರವು ಸೇರಿರುತ್ತದೆ (ಇಬ್ರಿಯ 5:8; ಫಿಲಿಪ್ಪಿ 2:8). ಇಲ್ಲಿ ಸಂಬಂಧವು ಇಬ್ಬರು ಸಮಾನವಾಗಿದ್ದು, ತನ್ನ ತಂದೆಯೊಂದಿಗೆ ಒಬ್ಬ ಪರಿಪಕ್ವಗೊಂಡಿರುವ ಮಗನಿಗಿರುವ ಸಂಬಂಧವಾಗಿದೆ. ಕ್ರಿಸ್ತನು ಮನುಷ್ಯರಿಗೆ ಸೇವಕನಾಗುವದಕ್ಕಾಗಿ ಮಾನವರ ಸ್ವಭಾವವನ್ನು ಧರಿಸಿಕೊಳ್ಳುವ ವೇಳೆಯಲ್ಲಿ ತನ್ನ ಸಮಾನತೆಯ ಕೆಲವು ಅಂಶಗಳನ್ನು ತಾತ್ಕಾಲಿಕವಾಗಿ ತ್ಯಜಿಸಿದನು (ಫಿಲಿಪ್ಪಿ 2:6, 7).

ಒಬ್ಬ ಮಗನು ತನ್ನ ತಂದೆಯ ಸ್ವಭಾವವನ್ನೇ ಹೊಂದಿರುತ್ತಾನೆ. ತಂದೆಯು ದೇವರಾಗಿದ್ದರೆ, ಮಗನು ಸಹ ದೇವರು ಮತ್ತು ದೇವರಿಗೆ ಸಮಾನನಾಗಿರಬೇಕಷ್ಟೆ. ಯೇಸು ದೇವರನ್ನು ತನ್ನ ತಂದೆಯೆಂದು ಕರೆದಾಗ ಯೆಹೂದ್ಯರು ಈ ತೀರ್ಮಾನವನ್ನೇ ಮಾಡಿ ಆತನನ್ನು ಹಿಂಸಿಸಿದರು. ಅವರು ಮನದಟ್ಟು ಮಾಡಿಕೊಂಡಿದ್ದೇನೆಂದರೆ, ಅವನು ದೇವರನ್ನು ತನ್ನ ತಂದೆಯೆಂದು ಕರೆಯುವ ಮೂಲಕ “ತನ್ನನ್ನು ದೇವರಿಗೆ ಸರಿಗಟ್ಟಿಕೊಂಡನು” ಎಂಬದೆ (ಯೋಹಾನ 5:18).

“ನಮ್ಮ ಕರ್ತನಾದ” ಎಂದರೆ ಕ್ರಿಸ್ತನು ನಮ್ಮ ಕರ್ತನು ಮಾತ್ರವೇ ಎಂದರ್ಥವಲ್ಲ – ಅಂದರೆ, ಕ್ರೈಸ್ತರ ಕರ್ತನು ಮಾತ್ರವೇ ಎಂದಲ್ಲ. ಆತನು ಪರಲೋಕ ಮತ್ತು ಭೂಲೋಕದ ಕರ್ತನಾಗಿದ್ದಾನೆ (ಮತ್ತಾಯ 28:18). ಹೇಗೂ, ಒಂದು ಅಧಿಕ ನಿರ್ಬಂಧಿತ ಅರ್ಥದಲ್ಲಿ, ಆತನನ್ನು ತಮ್ಮ ಕರ್ತನೆಂದು ಅಂಗೀಕರಿಸಿಕೊಂಡು ಬೇರೆ ಯಾವ ಕರ್ತನನ್ನೂ ಸೇವಿಸದ ಕ್ರೈಸ್ತರಿಗೆ ಮಾತ್ರವೇ ಯೇಸು ಕರ್ತನಾಗಿದ್ದಾನೆ. ಅವರಿಗೆ ಒಬ್ಬನೇ ಕರ್ತನು (1 ಕೊರಿಂಥ 8:6). ಕಾರ್ಯರೂಪದಲ್ಲಿ, ಇದು ಯಾವಾಗಲೂ ಸತ್ಯವಾಗಿರಲಾರದು; ಆದರೆ, ಉದ್ದೇಶದಲ್ಲಿ, ಇದು ಅವರ ಗುರಿಯಾಗಿರುತ್ತದೆ. ಆತನ ಹಿಂಬಾಲಕರಲ್ಲದವರು ಆತನನ್ನು ತಮ್ಮ ಕರ್ತನೆಂದು ಗೌರವಿಸುವದಿಲ್ಲ ಅಥವಾ ತಮ್ಮ ಜೀವಿತಗಳ ಕರ್ತನೆಂದು ಆತನನ್ನು ಅಂಗೀಕರಿಸಿಕೊಳ್ಳುವದಿಲ್ಲ.

“ಕರ್ತನು” κύριος (*kurios*) ಎಂದರೆ ಸರ್ವೋನ್ನತನಾದವನು, ಸರ್ವೋಚ್ಚನು, ಮತ್ತು ಆಳುವವನು ಎಂದರ್ಥವಾಗಿದೆ. ಅಪೊಸ್ತಲರ ಕೃತ್ಯಗಳು 25:26ರಲ್ಲಿ ಅರಸನಾದ ಅಗ್ರಿಪ್ಪನು ಈ ವಿಧದಲ್ಲಿ ಕರೆಯಲ್ಪಟ್ಟಿದ್ದಾನೆ. ಕೆಲವು ನಿದರ್ಶನಗಳಲ್ಲಿ, “ಕರ್ತನು” ಎಂಬುದು ಕೇವಲ ಒಂದು ಗೌರವ ಸೂಚಕವಾಗಿರಬಲ್ಲದು; ಉದಾಹರಣೆಗೆ, ಅದನ್ನು ಒಬ್ಬ ದಾಸನ ಮೇಲಿರುವ ಯಜಮಾನನನ್ನು ಸೂಚಿಸಿ ಹೇಳಬಹುದಾಗಿದೆ (ಮತ್ತಾಯ 18:25-34). ಹೊಸ ಒಡಂಬಡಿಕೆಯಲ್ಲಿ ಅದು ಬಹಳಷ್ಟು ಸಾರಿ ತಂದೆಯಾ, ದೇವರನ್ನು ಸೂಚಿಸಿ ಬಳಸಲ್ಪಟ್ಟಿದೆ (ಮತ್ತಾಯ 11:25), ಆದರೆ ಅತಿ ಹೆಚ್ಚು ಸಾರಿ ಮಗನಾದ ಯೇಸುವನ್ನು ಸೂಚಿಸಿ ಬಳಸಲ್ಪಟ್ಟಿದೆ (ಯೋಹಾನ 13:14; 1 ಕೊರಿಂಥ 8:6).

### “ನಾವು ಪ್ರಾರ್ಥನೆಮಾಡುವಾಗಲೆಲ್ಲಾ ನಿಮ್ಮ ನಿಮಿತ್ತವಾಗಿ . . . ಸ್ತೋತ್ರ ಮಾಡುತ್ತೇವೆ”

ಪೌಲನು ನಿರಂತರವಾಗಿ ಪ್ರಾರ್ಥಿಸಿದ್ದು ಮಾತ್ರವಲ್ಲದೆ, ಆತನು ಎಡೆಬಿಡದೆ ಪ್ರಾರ್ಥಿಸುವಂತೆ ಇತರರನ್ನು ಸಹ ಪ್ರೋತ್ಸಾಹಿಸಿದನು (1 ಥೆಸಲೋನಿಕ 5:17). ಆತನು **ಪ್ರಾರ್ಥನೆಮಾಡುವಾಗಲೆಲ್ಲಾ** ಮತ್ತು “ಎಡೆಬಿಡದೆ” ಎಂಬ ಪದಗಳ ಬಳಕೆಯಿಂದ, ಪೌಲನ ತಾತ್ಪರ್ಯವು ಸ್ವಲ್ಪವೂ ನಿಲ್ಲಿಸದೆ “ಬಿಟ್ಟುಬಿಡದೆ” ಅಥವಾ “ನಿರಂತರವಾಗಿ” ಪ್ರಾರ್ಥಿಸುತ್ತಲೇ ಇರಬೇಕೆಂದಾಗಿರಲಿಲ್ಲ. ಆತನು ಅನುದಿನವೂ ಪ್ರಾರ್ಥಿಸುವ ಕುರಿತಾಗಿ ಹೇಳುತ್ತಿದ್ದಾನೆ.

ಪೌಲನು ಪ್ರಾರ್ಥನೆಗೆ ಅತ್ಯಂಥ ಹೆಚ್ಚು ಪ್ರಾಮುಖ್ಯತೆ ಕೊಡುವದನ್ನು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ನಾವು ನೋಡುತ್ತೇವೆ. ಆತನು ಯೇಸುವನ್ನು ಕಂಡ ಬಳಿಕ ಪ್ರಾರ್ಥಿಸಿದನು (9:11), ಹಿರಿಯರನ್ನು ನೇಮಿಸುವ ಮುಂಚೆ ಪ್ರಾರ್ಥಿಸಿದನು (14:23), ಮತ್ತು ಫಿಲಿಪ್ಪಿಯದ ಸೆರೆಮನೆಯಲ್ಲಿರುವಾಗ ಪ್ರಾರ್ಥಿಸಿದನು ಎಂದು ನೋಡುತ್ತೇವೆ. ಆತನು ಸಹೋದರರನ್ನು ಬಿಟ್ಟು ಹೋಗುವ ಮುನ್ನ ಅವರೊಂದಿಗೆ ಪ್ರಾರ್ಥಿಸಿದನು (20:36; 21:5). ಆತನು ದೇವಾಲಯದಲ್ಲಿದ್ದ ವೇಳೆ ಪ್ರಾರ್ಥನೆಯನ್ನು ಸಲ್ಲಿಸಿದನು (22:17) ಮತ್ತು ಪೊಪ್ಲಿಯನ ತಂದೆಯನ್ನು ಸ್ವಸ್ಥಪಡಿಸುವ ಮುನ್ನ ಪ್ರಾರ್ಥನೆ ಮಾಡಿದನು (28:8). ಆತನು ಕ್ರೈಸ್ತರಿಗಾಗಿ ಮಾತ್ರ ಪ್ರಾರ್ಥಿಸಲಿಲ್ಲ,[2] ಆದರೆ ಕ್ರೈಸ್ತೇತರರಿಗಾಗಿ ಸಹ ಪ್ರಾರ್ಥಿಸಿದನು.

ಪೌಲನು ಅವರಿಗೋಸ್ಕರ ಪ್ರಾರ್ಥಿಸುತ್ತಿದ್ದಾನೆಂಬದನ್ನು ಕೇಳಿದಾಗ ಅದು ಕೊಲೊಸ್ಸೆಯವರಿಗೆ ಬಹಳ ಆದರಣೆಯನ್ನು ತಂದಿರಬಹುದಾಗಿದೆ. ಆತನ ಮಾದರಿಯನ್ನು ಅನುಸರಿಸುವವರಾಗಿ, ಕ್ರೈಸ್ತರು ಕ್ರಿಸ್ತನಲ್ಲಿರುವವರಿಗೋಸ್ಕರ ಸ್ತೋತ್ರದ ಪ್ರಾರ್ಥನೆಗಳನ್ನು ಯಾವಾಗಲೂ ಮಾಡುವವರಾಗಿರಬೇಕು.

## ಅವರ ನಂಬಿಕೆ ಮತ್ತು ಪ್ರೀತಿ (1:3-5)

**3-5 ಕ್ರಿಸ್ತ ಯೇಸುವಿನಲ್ಲಿ ನೀವು ಇಟ್ಟ ನಂಬಿಕೆಯ ವಿಷಯವಾಗಿಯೂ ದೇವಜನರ ಮೇಲಿರುವ ನಿಮ್ಮ ಪ್ರೀತಿಯ ವಿಷಯವಾಗಿಯೂ ನಾವು ಕೇಳಿ ಪರಲೋಕದಲ್ಲಿ ನಿಮಗೋಸ್ಕರ ಸಿದ್ಧವಾಗಿರುವ ಮಹಾಪದವಿಯನ್ನು ನೆನಸುತ್ತಾ ನಾವು ಪ್ರಾರ್ಥನೆ ಮಾಡುವಾಗಲೆಲ್ಲಾ ನಿಮ್ಮ ನಿಮಿತ್ತವಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾಗಿರುವ ದೇವರಿಗೆ ಸ್ತೋತ್ರ ಮಾಡುತ್ತೇವೆ. ನೀವು ಆ ಪದವಿಯನ್ನು ಕುರಿತು ನಿಮ್ಮ ಬಳಿಗೆ ಬಂದಿರುವ ಸುವಾರ್ತೆಯ ಸತ್ಯವಾಕ್ಯದಿಂದ ಮೊದಲೇ ಕೇಳಿದಿರಿ.**

### “ಕ್ರಿಸ್ತ ಯೇಸುವಿನಲ್ಲಿ ನೀವು ಇಟ್ಟ ನಂಬಿಕೆಯ ವಿಷಯವಾಗಿಯೂ . . . ನಾವು ಕೇಳಿ”

**ಕೇಳಿ** (ἀκούσαντες, *akousantes*) ಎಂಬುದರ ಶಾಬ್ದಿಕ ರೂಪು ಹೊಸ ಒಡಂಬಡಿಕೆಯಲ್ಲಿ ಸತತವಾಗಿ ಕಾಣಿಸಿಕೊಳ್ಳುತ್ತದೆ. ಇದು ಗ್ರೀಕ್‌ನಲ್ಲಿ ಅನಿಶ್ಚಿತ ಭೂತಕಾಲ ಕೃದಂತ ಆಗಿದೆ ಮತ್ತು 5ನೇ ವಚನದಲ್ಲಿರುವ “ಸ್ತೋತ್ರ ಮಾಡುತ್ತೇವೆ”3 ಎಂಬ ಕ್ರಿಯಾಪದಕ್ಕೆ ಅಧೀನವಾಗಿರುತ್ತದೆ.[3] “ಕೇಳಿ” ಎಂಬುದರ ಕ್ರಿಯೆಯು “ಸ್ತೋತ್ರ

ಮಾಡುವದಕ್ಕೆ ಮುಂಚೆ ಸಂಭವಿಸಿತು. ಗ್ರೀಕ್‌ನ ಇದೇ ರಚನೆಯು ಮಾರ್ಕ 16:16ರಲ್ಲಿ ಕಾಣಿಸಿಕೊಳ್ಳುತ್ತದೆ, ಅಲ್ಲಿ "ನಂಬಿ" ಮತ್ತು "ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು" ಎಂಬವುಗಳು ಸಹ ಅನಿಶ್ಚಿತ ಭೂತಕಾಲ ಕೃದಂತಗಳಾಗಿದ್ದು, ಮುಖ್ಯ ಕ್ರಿಯಾಪದವಾದ "ರಕ್ಷಣೆಹೊಂದುವನು" ಎಂಬುದರ ಕ್ರಿಯೆಯ ಮುಂಚೆ ಅವುಗಳು ಬರತಕ್ಕದ್ದು ಎಂದರ್ಥವಾಗಿರುತ್ತದೆ.

ಎಪಫ್ರನು ಮತ್ತು ಬಹುಶಃ ಇತರರಿಂದ ದೊರೆತ ವರದಿಗಳ ಮೂಲಕ ಪೌಲ ಹಾಗೂ ತಿಮೊಥೆಯರಿಗೆ ಕೊಲೊಸ್ಸೆಯವರ ಜೀವಿತಗಳ ಬಗ್ಗೆ ತಿಳಿದಿತ್ತು. ಪೌಲನು ವಿವಿಧ ಸಭೆಗಳ ವಿಷಯದಲ್ಲಿ ಪಡೆದುಕೊಂಡ ವರದಿಗಳಲ್ಲಿ ಒಳ್ಳೇ ನಡತೆ, ಕೆಟ್ಟ ನಡತೆ, ಸಭೆಯಲ್ಲಿನ ಸಮಸ್ಯೆಗಳು, ಮತ್ತು ಸುಳ್ಳು ಬೋಧನೆ ಮುಂತಾದವುಗಳು ಸೇರಿರುತ್ತಿದ್ದವು. ಆತನು ಕೆಲವು ಸಾರಿ ತನ್ನ ಮೂಲವನ್ನು ಹೆಸರಿಸುತ್ತಿದ್ದನು, ಉದಾಹರಣೆಗೆ ಕೊರಿಂಥದವರ ಬಗ್ಗೆ ಖ್ಲೋಯೆಯ ಮನೆಯವರಿಂದ ತಿಳುಕೊಂಡಿದ್ದನು (1 ಕೊರಿಂಥ 1:11). ಅಲ್ಲದೆ ಪವಿತ್ರಾತ್ಮನು ಸಹ ಸಭೆಗಳೊಳಗಿನ ಪರಿಸ್ಥಿತಿಗಳ ಬಗ್ಗೆ ಪ್ರಕಟಗೊಳಿಸಿದನು (1 ಕೊರಿಂಥ 5:3; ಕೊಲೊಸ್ಸೆ 2:5). ಇನ್ನಿತರ ಸಮಯಗಳಲ್ಲಿ, ತನಗೆ ವರದಿ ಬಂದಿದೆ ಎಂದಷ್ಟೆ ಪ್ರಸ್ತಾಪಿಸುತ್ತಿದ್ದನು ಆದರೆ ಅದರ ಮೂಲದ ಬಗ್ಗೆ ಹೇಳುತ್ತಿರಲಿಲ್ಲ (1 ಕೊರಿಂಥ 5:1; 1 ಥೆಸಲೋನಿಕ 1:9).

ಪೌಲನು ಸಭೆಗಳಿಂದ ಬಂದ ವರಿದಿಗಳಿಗೆ ಸಾಮಾನ್ಯ ರೀತಿಯಲ್ಲಿ ಪ್ರತಿಸ್ಪಂದಿಸುತ್ತಿದ್ದನು. ಫಿಲಿಪ್ಪಿಯವರಿಗೆ ಪತ್ರಿಕೆಯಲ್ಲಿ, ಪೌಲನು ಪರಸ್ಪರ ಹೊಂದಿಕೊಂಡು ಹೋಗದಿದ್ದಂಥ ಯುವೊದ್ಯಳನ್ನು ಮತ್ತು ಸಂತುಕೆಯನ್ನು ಹೆಸರಿಸಿದನು – ಅದು ಸರಿ ಪಡಿಸಲು ಅಗತ್ಯವಿದ್ದಂಥ ಒಂದು ಸಮಸ್ಯೆಯಾಗಿತ್ತು (ಫಿಲಿಪ್ಪಿ 4:2). 2 ತಿಮೊಥೆ 2:16-18ರಲ್ಲಿ ಹುಮೆನಾಯ ಮತ್ತು ಪಿಲೇತನ, ಇವರ ಬಗ್ಗೆ ಎಚ್ಚರವಾಗಿದ್ದು ಅವರಿಂದ ದೂರವಿರಿ ಎಂದು ಅವರನ್ನು ಹೆಸರಿಸುತ್ತಾನೆ. ಪೌಲನನ್ನು ತೊರೆದು ಹೋಗಿದ್ದ ದೇಮನು 2 ತಿಮೊಥೆ 4:10ರಲ್ಲಿ ಹೆಸರಿಸಲ್ಪಟ್ಟಿದ್ದಾನೆ. ಪೌಲನು ಅವರೆಡೆಗೆ ಗಮನವನ್ನು ಕೊಡುವಂತೆ ಹೇಳಿದ್ದರ ಉದ್ದೇಶವು ಭಿನ್ನಾಭಿಪ್ರಾಯವಿದ್ದ ಇಬ್ಬರು ಸ್ತ್ರೀಯರಿಗೆ ಸಹಾಯ ಮಾಡುವದು, ಇಬ್ಬರು ಸುಳ್ಳು ಬೋಧಕರ ಬಗ್ಗೆ ಎಚ್ಚರಿಸುವದು, ಮತ್ತು ಕ್ರಿಸ್ತ ನಂಬಿಕೆಯನ್ನು ಬಿಟ್ಟು ಹೋಗಿದ್ದ ಒಬ್ಬ ಸಹೋದರನ ಕುರಿತು ವರದಿಯನ್ನು ಕೊಡುವದು ಆಗಿತ್ತು.

ನಾವು ಒಬ್ಬರನ್ನೊಬ್ಬರು "ನಿಂದಿಸಬಾರದು" (ಯಾಕೋಬ 4:11) ಅಥವಾ "ಒಬ್ಬೊಮೇಲೊಬ್ಬರು ಗುಣಗುಟ್ಟಬೇಡಿರಿ" (ಯಾಕೊಬ 5:9) ಎಂದು ಯಾಕೋಬನು ಬರೆದನು. ಕ್ರೈಸ್ತರ ಹಾಗೂ ಸಭೆಗಳ ತಪ್ಪಾದ ಜೀವನ ಬಗ್ಗೆ ವರದಿಗಳು ಕಿವಿಊದುವದು ಎಂದಾಗುವದೋ? ಕಿವಿಊದುವದು – ಯಾವದೇ ಒಳ್ಳೇ ಉದ್ದೇಶವಿಲ್ಲದೆ ಮತ್ತೊಬ್ಬರ ವ್ಯವಹಾರಗಳಲ್ಲಿ ಮೂಗು ತೂರಿಸುವದು – ಇತರ ದುಷ್ಕೃತ್ಯಗಳೊಂದಿಗೆ ಪಟ್ಟಿ ಮಾಡಲ್ಪಟ್ಟಿದೆ ಮತ್ತು ಖಂಡಿಸಲ್ಪಟ್ಟಿದೆ (ರೋಮಾ 1:29; 2 ಕೊರಿಂಥ 12:20; 1 ತಿಮೊಥೆ 5:13; 2 ತಿಮೊಥೆ 3:3; ತೀತನಿಗೆ 2:3). ಜನರ ಬಗ್ಗೆ ಈ ರೀತಿಯ ಮಾತಾಡಿಕೊಳ್ಳುವದಕ್ಕೂ ಒಂದು ಪರಿಹಾರವನ್ನು ಕಂಡುಕೊಳ್ಳುವದಕ್ಕೋಸ್ಕರ ಒಂದು ಸಮಸ್ಯೆಯನ್ನು ಇತರರ ಬಳಿಯಲ್ಲಿ ಹೇಳಿಕೊಳ್ಳುವದಕ್ಕು ಅಥವಾ ಹಂಚಿಕೊಳ್ಳುವದಕ್ಕೂ ವ್ಯತ್ಯಾಸವಿರುತ್ತದೆ.

ಕೊಲೊಸ್ಸೆಯ ಸಹೋದರರು ಮತ್ತು ಸಹೋದರಿಯ ವಿಷಯವಾಗಿ ಪೌಲನಿಗೆ ಬಂದಿದ್ದ ವರದಿಯು ಉತ್ತಮವಾಗಿತ್ತು. ಅವರ ನಂಬಿಕೆಯ, ಅವರನ್ನು ಕ್ರಿಸ್ತನಲ್ಲಿ ನಿಷ್ಠಾವಂತ

ಸದಸ್ಯರನ್ನಾಗಿ ಮಾಡಿದ್ದ ನಂಬಿಕೆಯ ಕುರಿತು ಇತರರು ಮಾತಾಡಿಕೊಳ್ಳುತ್ತಿದ್ದರು. ಅವರು ಮತ್ತಾಯ 5:14ರಲ್ಲಿ ಯೇಸುವಿನಿಂದ ಬಣ್ಣಿಸಲ್ಪಟ್ಟಿರುವಂತಿದ್ದರು: "ಗುಡ್ಡದ ಮೇಲೆ ಕಟ್ಟಿರುವ ಊರು ಮರೆಯಾಗಿರಲಾರದು." ಎಲ್ಲಾ ಕ್ರೈಸ್ತರು ಗುರಿಯು ಇತರರು ಅವರ ಬಗ್ಗೆ ಕೇಳುವವರಾಗಿ ಅವರ ನಂಬಿಕೆಯ ಮೂಲಕ ಪ್ರೋತ್ಸಾಹಗೊಳ್ಳಯವಂತಾಗುವ ರೀತಿಯಲ್ಲಿ ಜೀವಿಸಬೇಕೆಂಬುದೇ ಆಗಿರಬೇಕು.

4 ಮತ್ತು 5 ವಚನಗಳಲ್ಲಿ, ಪೌಲನು ಒಂದು ನೆಚ್ಚಿನ ಮುಕ್ಕೂಟ ಸೇರ್ಪಡೆಗೊಳಿಸುತ್ತಾನೆ: "ನಂಬಿಕೆ," "ಪ್ರೀತಿ," ಮತ್ತು "ನಿರೀಕ್ಷೆ." ಹೊಸ ಒಡಂಬಡಿಕೆಯ ಬರಹಗಾರರು ಸತತವಾಗಿ ಅವುಗಳನ್ನು ಒಟ್ಟಾಗಿ ಸಂಬಂಧ ಪಡಿಸುತ್ತಾರೆ.[4] ಪೌಲನು ಈ ಮೂರು ಪದಗಳ ಸೇರ್ಪಡೆ ಮಾಡಿದ್ದನ್ನು J. B. Lightfoot ಹೀಗೆ ಸಾರಾಂಶಗೊಳಿಸುತ್ತಾನೆ:

> ನೀವು ಕ್ರಿಸ್ತ ಯೇಸುವಿನಲ್ಲಿ ಹೊಂದಿರುವ *ನಂಬಿಕೆ*, ಮತ್ತು ನೀವು ಎಲ್ಲಾ ದೇವಜನರ ಕಡೆಗೆ ತೋರುವ *ಪ್ರೀತಿಯ* ಬಗ್ಗೆ, ಅದೇ ವೇಳೆಯಲ್ಲಿ ಬರಲಿರುವ ಜೀವಿತಕ್ಕಾಗಿ ಒಂದು ಬೊಕ್ಕಸದಂತ ನಿಮಗಾಗಿ ಪರಲೋಕದಲ್ಲಿ ಕೂಡಿಸಿಡಲ್ಪಟ್ಟಿರುವ ಆ *ನಿರೀಕ್ಷೆ*ಯನ್ನು ಎದುರುನೋಡುವವರಾಗಿರುವಿರಿ ಎಂಬ ಸುದ್ದಿಗಳನ್ನು ಕೇಳಿ ನಾವು ಕೃತಜ್ಞತೆಯಿಂದ ತುಂಬಿರುತ್ತೇವೆ.[5]

ಈ ಸನ್ನಿವೇಶದಲ್ಲಿ **ಕ್ರಿಸ್ತ ಯೇಸುವಿನಲ್ಲಿ ನೀವು ಇಟ್ಟಿರುವ ನಂಬಿಕೆ** ಎಂಬುದರ ಅರ್ಥದ ಬಗ್ಗೆ ವ್ಯಾಖ್ಯಾನಕಾರರು ಪರಸ್ಪರ ಕಾಳಗಕ್ಕೆ ಇಳಿದಿರುವಂತೆ ತೋರುತ್ತದೆ. ಈ ಕೆಳಗಿನ ಆಲೋಚನೆಯಲ್ಲಿನ ಭಿನ್ನತೆಗಳನ್ನು ಗಮನಿಸಿರಿ. ಮೊದಲನೆಯದಾಗಿ, Herbert M. Carson ಹೀಗೆ ಬರೆಯುತ್ತಾನೆ,

> *ಕ್ರಿಸ್ತ ಯೇಸುವಿನಲ್ಲಿ* ಎಂಬ ಪದಗುಚ್ಛವು ಈ ಸನ್ನಿವೇಶದಲ್ಲಿ ಕ್ರಿಸ್ತನು ಅವರ ನಂಬಿಕೆಯ ವಸ್ತು ಆಗಿದ್ದಾನೆಂದು ಅರ್ಥವಾಗಿರುವದಿಲ್ಲ, ಖಂಡಿತವಾಗಿಯೂ ಅದು ಸತ್ಯವೇ ಆದರೂ, ಆ ಅರ್ಥದಲ್ಲಿ ಇದ್ದದ್ದೇ ಆದಲ್ಲಿ ಅಲ್ಲಿ *eis* ಅಥವಾ *epi* ಅಗತ್ಯವಿರುತ್ತಿತ್ತು. ಅದು ಬದಲಾಗಿ ನಾವು 2ನೇ ವಚನದಲ್ಲಿ ಈಗಾಗಲೇ ನೋಡರುವಂತೆ ಪೌಲನ ಪರಿಚಿತವಾದ ಬಳಕೆಯಾಗಿರುತ್ತದೆ. ಅವರು ಕ್ರಿಸ್ತನಿಂದ ತಮ್ಮ ಜೀವನವನ್ನು ಸೆಳೆಯುವ ಅರ್ಥದಲ್ಲಿ *ಕ್ರಿಸ್ತನಲ್ಲಿ* ಇದ್ದಾರೆ . . . ಹೀಗೆ ಅವರು ತೋರ್ಪಡಿಸುವ ನಂಬಿಕೆಯು ತನ್ನ ಶಕ್ತಿಯನ್ನು ಅವರು ಕ್ರಿಸ್ತನೊಂದಿಗೆ ಹೊಂದಿರುವ ಸಂಬಂಧದಿಂದ ಪಡೆದುಕೊಳ್ಳುವದಾಗಿದೆ. ಆ ನಂಬಿಕೆಯನ್ನು ಚಲಾಯಿಸುವದು ಅವರು ಆತನೊಂದಿಗೆ ಹೊಂದಿರುವ ಐಕ್ಯತೆಯ ನಿಯಂತ್ರಣದಲ್ಲಿರುತ್ತದೆ.[6]

Lightfoot ಈ ನಿರ್ಣಯಕ್ಕೆ ಬರುವದರೊಂದಿಗೆ ಸಮ್ಮತಿ ವ್ಯಕ್ತಪಡಿಸುತ್ತಾನೆ:

> ಇಲ್ಲಿ ಮತ್ತು ಇತರ ಸಮಾನವಾದ ವಾಕ್ಯಭಾಗವಾದ, ಎಫೆಸ 1:15ರಲ್ಲಿ, ಈ *ἐν* ಎಂಬ ಉಪಸರ್ಗವು ಅವರ ನಂಬಿಕೆಯು ನಿರ್ದೇಶಿಸಲ್ಪಡುವ ಲಕ್ಷ್ಯವನ್ನು ಸೂಚಿಸುವ ಬದಲಾಗಿ ಅವರ ನಂಬಿಕೆಯು ಚಲಿಸುವ ಗೋಲವನ್ನು ಸೂಚಿಸುತ್ತದೆ (1 ಕೊರಿಂಥ 3:5 ಹೋಲಿಸಿರಿ); ಯಾಕೆಂದರೆ, ಲಕ್ಷ್ಯವೇ ಎಂದಾಗಿದ್ದರೆ, ಸ್ವಾಭಾವಿಕವಾದ ಉಪಸರ್ಗವು *ἐπί* ಅಥವಾ *εἰς* ಆಗಿರುತ್ತಿತ್ತು (ಉದಾಹರಣೆಗೆ 2:5).[7]

F. F. Bruce ಸ್ವಲ್ಪ ವ್ಯತ್ಯಾಸವಾದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ:

> ಇಲ್ಲಿ ಕಾಣಿಸಿಕೊಳ್ಳುವ "ಕ್ರಿಸ್ತ ಯೇಸುವಿನಲ್ಲಿ" ಎಂಬುದನ್ನು ಅವರ ನಂಬಿಕೆಯ ಲಕ್ಷ್ಯವೆಂಬಂತೆ ಅಲ್ಲದೆ ಅವರ ನಂಬಿಕೆಯು ಚಲಾಯಿಸಲ್ಪಟ್ಟ ಜೀವಿಸುವ ಪರಿಸರ ಎಂದು ಕಾಣತಕ್ಕದ್ದು; ಅದರ್ಥವೇನೆಂದರೆ, ಅಪೊಸ್ತಲನು ಮಾತಾಡುವ ನಂಬಿಕೆಯು ಅವರು "ಕ್ರಿಸ್ತ ಯೇಸುವಿನಲ್ಲಿ" ಇರುವ ಪುರುಷರು ಮತ್ತು ಸ್ತ್ರೀಯರಾಗಿ ಹೊಂದಿರುವ ನಂಬಿಕೆಯಾಗಿರುತ್ತದೆ ಎಂಬದೆ.[8]

"ಅವರ ನಂಬಿಕೆಯು ಕ್ರಿಸ್ತ ಯೇಸುವಿನ ಗೋಲದಲ್ಲಿ ಚಲಿಸುವದಾಗಿತ್ತು" ಎಂದು ಹೇಳುವ ಮೂಲಕ A. T. Robertson ಇನ್ನೊಂದು ಆಯಾಮವನ್ನು ಸೇರ್ಪಡೆಗೊಳಿಸುತ್ತಾನೆ (2 ತಿಮೊಥೆ 1:13). ಅದು ನಿಷ್ಠೆಗಿಂತೂ ಅಧಿಕವಾದದ್ದು; ಅದಿ ಕ್ರಿಸ್ತನಲ್ಲಿ ಇಟ್ಟಿರುವ ಆಂತರಿಕ ವಿಶ್ವಾಸ ಆಗಿರುತ್ತದೆ . . .[9]

ಒಟ್ಟಾರೆಯಾಗಿ, "ಕ್ರಿಸ್ತ ಯೇಸುವಿನಲ್ಲಿ" ಎಂಬುದು ಸಾಮಾನ್ಯವಾಗಿ ಯೇಸುವಿನೊಂದಿಗೆ ಕ್ರೈಸ್ತರಿಗೆ ಇರುವ ಸಂಬಂಧವನ್ನು ಬಣ್ಣಿಸುವದಕ್ಕೆ ಪೌಲನಿಂದ ಬಳಸಲ್ಪಡುತ್ತಿತ್ತು. ಅವರು ಆತನೊಂದಿಗೆ ಹೊಂದಿರುವ ಆಪ್ತವಾದ ಸಹವಾಸ ಮತ್ತು ಆತನು ಒದಗಿಸುವ ಆಶೀರ್ವಾದಗಳನ್ನು ಆ ಪದವು ಸೂಚಿಸುತ್ತದೆ. ಈ ವಾಕ್ಯಭಾಗದಲ್ಲಿ ಪೌಲನ ತಾತ್ಪರ್ಯವು ಅವರು ಕ್ರಿಸ್ತನಲ್ಲಿಟ್ಟಿದ್ದ ನಂಬಿಕೆ ಎಂದು ಆಗಿಲ್ಲದಿರಬಹುದು. ಆತನು ಇತರ ವಾಕ್ಯಭಾಗಗಳಲ್ಲಿ ಮಾಡಿದಂತೆ ಇಲ್ಲಿ "ಕ್ರಿಸ್ತನ ನಂಬಿಕೆ" ಎಂಬರ್ಥದಲ್ಲಿ ದ್ವಿತೀಯಾರ್ಥಕ ಷಷ್ಠೀಯ ಬಳಕೆ ಮಾಡಲಿಲ್ಲ. ಆ ಪದವಿನ್ಯಾಸದ ಪ್ರಕಾರ, ಉಲ್ಲೇಖಿಸಲ್ಪಟ್ಟ ನಂಬಿಕೆಯು ತನ್ನ ಲಕ್ಷ್ಯವಾಗಿ ಕ್ರಿಸ್ತನಲ್ಲಿಡಲ್ಪಟ್ಟ ನಂಬಿಕೆಯಾಗುವದು. ಬದಲಾಗಿ, ಆತನ ತಾತ್ಪರ್ಯವು ಏನಾಗಿತ್ತೆಂದರೆ ಕ್ರಿಸ್ತನಲ್ಲಿದ್ದ ಕೊಲೊಸ್ಸೆಯವರು ತಮ್ಮ ನಂಬಿಕೆಯನ್ನು ಚಲಾಯಿಸುತ್ತಿದ್ದರು ಎಂಬದೆ. ಆತನು ಅವರ ನಂಬಿಕೆಯ ಕುರಿತಾಗಿ ಕೇಳಿದ್ದನು, ಅದು ಕ್ರಿಸ್ತನಲ್ಲಿದ್ದವರ ಹೃದಯಗಳಲ್ಲಿದ್ದಂಥ ನಂಬಿಕೆಯಾಗಿತ್ತು. ಇದಕ್ಕಾಗಿ ಆತನು ಸ್ತೋತ್ರ ಮಾಡುವವನಾಗಿದ್ದನು (ವ.5).

## "ದೇವಜನರ ಮೇಲಿರುವ ನಿಮ್ಮ ಪ್ರೀತಿಯ ವಿಷಯವಾಗಿಯೂ"

ಪೌಲನು ಮೊದಲು ಕೊಲೊಸ್ಸೆಯವರು ನಂಬಿಕೆ ಬಗ್ಗೆ ಉಲ್ಲೇಖಿಸಿದನು, ಮತ್ತು ನಂತರ ಅವರ ಪ್ರೀತಿಯ ಕುರಿತು ಪ್ರಸ್ತಾಪಿಸುತ್ತಾನೆ. ಎಲ್ಲಾ ಕ್ರೈಸ್ತ ಸದ್ಗುಣಗಳು ಕಟ್ಟಲ್ಪಡುವಂಥ ಅಸ್ತಿವಾರವು ನಂಬಿಕೆಯಾಗಿರುತ್ತದೆ (2 ಪೇತ್ರ 1:5-7). ಸತ್ಯವಾದ ನಂಬಿಕೆಯು ಒಂದೇ ನಂಬಿಕೆಯುಳ್ಳವರ ಕಡೆಗೆ ಪ್ರೀತಿಯನ್ನು ಹೊಂದಿರುವಂತೆ ನಡಿಸುತ್ತದೆ. ಯೇಸುವಿನ ಹಿಂಬಾಲಕರನ್ನು ಒಬ್ಬರೊಬ್ಬರಿಂದ ಬೇರ್ಪಡಿಸುವ ಬದಲಾಗಿ, ನಂಬಿಕೆಯು ನಮ್ಮ ಜೊತೆ ಕ್ರೈಸ್ತರನ್ನು ಪ್ರೀತಿಯಿಂದ ಸಂಧಿಸುವಂತೆ ಮಾಡುತ್ತದೆ.

**ಪ್ರೀತಿ** ನಿರ್ಬಂಧದಿಂದ ಕೂಡಿದ್ದಲ್ಲ; ಅದು ಎಲ್ಲಾ **ದೇವಜನರ**ನ್ನೆಲ್ಲಾ ಒಳಗೊಳ್ಳುತ್ತದೆ. ಅದು ಸಭೆಯೊಳಗೆ ಪ್ರತ್ಯೇಕವಾದ ಗುಂಪುಗಳನ್ನು ಸೃಷ್ಟಿಸುವದಿಲ್ಲ. ಯೇಸುವು ಪರಿಚಯಿಸಿದ ಪ್ರೀತಿಯು ಜಾತಿ, ಜನಾಂಗ, ಸಾಮಾಜಿಕ ಸ್ಥಾನಮಾನ, ಲಿಂಗ, ಮತ್ತು ವ್ಯಕ್ತಿತ್ವವನ್ನು ದಾಟಿ ತಲುಪುತ್ತದೆ. ಲೋಕದ ಮೇಲೆ ದೇವರು ಇಟ್ಟಿರುವ ಪ್ರೀತಿಯು (ಯೋಹಾನ 3:16) ಮಾನವ ಹಿನ್ನಲೆಗಳ ಕಾರಣದಿಂದ ಪಕ್ಷಪಾತವನ್ನು ಮಾಡುವದಿಲ್ಲ.

ದೇವರ ಪ್ರೀತಿಯು ವ್ಯಕ್ತಿಯು ಪ್ರೀತಿಗೆ ಅರ್ಹನೋ ಎಂಬುದಕ್ಕಿಂತಲೂ ದೇವರು ಪ್ರೀತಿಸ್ವರೂಪನು ಎಂಬುದರ ಮೇಲೆ ಹೆಚ್ಚು ಅವಲಂಭಿತವಾಗಿರುತ್ತದೆ (ರೋಮಾ 5:7, 8; 1 ಯೋಹಾನ 4:8). ಕ್ರೈಸ್ತರು ಸಹ ಅದೇ ರೀತಿಯಲ್ಲಿ ಪ್ರೀತಿಸಬೇಕಾಗಿರುತ್ತದೆ. ಇತರರು ಪ್ರೀತಿಗೆ ಅರ್ಹರಾಗಿದ್ದರೂ ಸರಿಯೇ ಅಥವಾ ಇಲ್ಲದಿದ್ದರೂ ಸರಿಯೇ, ನಾವು ಇತರರನ್ನು ಪ್ರೀತಿಸತಕ್ಕದ್ದು. ಈ ಗುಣಸ್ವಭಾವದ ಪ್ರೀತಿಯ ಮೂಲಕ, ನಾವು ಕ್ರೈಸ್ತರು, ಯೇಸುವಿನ ನಿಜವಾದ ಹಿಂಬಾಲಕರು ಎಂಬುದನ್ನು ತೋರ್ಪಡಿಸಿಕೊಳ್ಳುತ್ತೇವೆ (ಯೋಹಾನ 13:35).

ಕ್ರಿಸ್ತನಲ್ಲಿ ಕೊಲೊಸ್ಸೆಯವರ ಪ್ರೀತಿಯ ನಿಮಿತ್ತ ಪೌಲನು ಸ್ತೋತ್ರ ಮಾಡುವವನಾಗಿದ್ದನು. ಕ್ರೈಸ್ತ ಸದ್ಗುಣಗಳಲ್ಲಿ ಅತಿ ಶ್ರೇಷ್ಠವೆಂದರೆ "ಪ್ರೀತಿ" (*ἀγάπη*, *agapē*). ಪ್ರೀತಿಯು ನಂಬಿಕೆ ಮತ್ತು ನಿರೀಕ್ಷೆಗಳಿಗಿಂತಲೂ ಶ್ರೇಷ್ಠವಾದದ್ದು (1 ಕೊರಿಂಥ 13:13). ಇತರರು ಆತನ ಹಿಂಬಾಲಕರನ್ನು ಗುರುತಿಸುವ ರೀತಿಯೇ ಪ್ರೀತಿ ಎಂಬುದಾಗಿ ಯೇಸು ಹೇಳಿದನು. ಎಲ್ಲಕ್ಕಿಂತ ಮೇಲಾಗಿ, ಪ್ರೀತಿಯನ್ನು ಕ್ರೈಸ್ತ ಜೀವಿತಕ್ಕೆ ಸೇರ್ಪಡೆಗೊಳಿಸಿಕೊಳ್ಳಬೇಕೆಂದು ಪೌಲ ಮತ್ತು ಪೇತ್ರರು ಬರೆದರು (ಕೊಲೊಸ್ಸೆ 3:14; 1 ಪೇತ್ರ 4:8). ಕ್ರೈಸ್ತ ಬೆಳವಣಿಗೆಗಾಗಿ ಪೇತ್ರನು ಪ್ರೀತಿಯನ್ನು, ಒಂದು ಕೀರಿಟಪ್ರಾಯವಾದ ಸಾಧನೆಯೆಂಬಂತೆ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿಟ್ಟನು (2 ಪೇತ್ರ 1:7).

"ದೇವಜನರ" ("ಎಲ್ಲಾ ದೇವಜನರು" NASB) ಎಂಬ ಪದಗುಚ್ಛದಲ್ಲಿ, ಕೊಲೊಸ್ಸೆಯವರು ಪ್ರಪಂಚದಲ್ಲಿದ್ದ "ಎಲ್ಲಾ ದೇವಜನರನ್ನು" ಬಲ್ಲವರಾಗಿದ್ದರು ಮತ್ತು ಪ್ರೀತಿಸಿದರು ಎಂಬ ಅರ್ಥವನ್ನು ಸೂಚಿಸಿ ಪೌಲನು ಹೇಳಲಿಲ್ಲ. ಆತನ ತಾತ್ಪರ್ಯವು ಕೊಲೊಸ್ಸೆಯಲ್ಲಿರುವ ದೇವಜನರು ಮತ್ತು ನಂಬಿಗಸ್ತ ಸಹೋದರರು ತಾವು ಕೇಳಲ್ಪಟ್ಟಿದ್ದ ಅಥವಾ ಪರಿಚಯವಿದ್ದ "ಎಲ್ಲಾ" ದೇವಜನರನ್ನು ಪ್ರೀತಿಸಿದರು ಎಂದಾಗಿರಬಹುದಾಗಿದೆ. ನಾವು ಇತರರ ಕ್ರೈಸ್ತರನ್ನು ಪ್ರೀತಿಸುವದಕ್ಕೆ ಮುನ್ನ ಅವರ ಬಗ್ಗೆ ಪೂರ್ಣವಾಗಿ ತಿಳಿದುಕೊಳ್ಳುವ ತನಕ ಕಾಯಬೇಕಾಗಿಲ್ಲ. ನಾವು ನಮ್ಮ ಸಹೋದರರನ್ನು ಸಂಧಿಸಿದ ಕೂಡಲೆ ಅಥವಾ ಅವರ ಬಗ್ಗೆ ಕೇಳಿದ ಕೂಡಲೆ ಪ್ರೀತಿಸತಕ್ಕದ್ದು. ದೇವರ ಪ್ರೀತಿಯನ್ನೆ ಮಾದರಿ ಮಾಡಿಕೊಂಡು ನಾವು ನಮ್ಮ ಪ್ರೀತಿಯನ್ನು ಬೆಳೆಸಿಕೊಳ್ಳಬೇಕು.

## ಅವರ ಪರಲೋಕದ ನಿರೀಕ್ಷೆ (1:3-5)

**3-5 ಕ್ರಿಸ್ತ ಯೇಸುವಿನಲ್ಲಿ ನೀವು ಇಟ್ಟ ನಂಬಿಕೆಯ ವಿಷಯವಾಗಿಯೂ ದೇವಜನರ ಮೇಲಿರುವ ನಿಮ್ಮ ಪ್ರೀತಿಯ ವಿಷಯವಾಗಿಯೂ ನಾವು ಕೇಳಿ ಪರಲೋಕದಲ್ಲಿ ನಿಮಗೋಸ್ಕರ ಸಿದ್ಧವಾಗಿರುವ ಮಹಾಪದವಿಯನ್ನು ನೆನಸುತ್ತಾ ನಾವು ಪ್ರಾರ್ಥನೆ ಮಾಡುವಾಗಲೆಲ್ಲಾ ನಿಮ್ಮ ನಿಮಿತ್ತವಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾಗಿರುವ ದೇವರಿಗೆ ಸ್ತೋತ್ರ ಮಾಡುತ್ತೇವೆ. ನೀವು ಆ ಪದವಿಯನ್ನು ಕುರಿತು ನಿಮ್ಮ ಬಳಿಗೆ ಬಂದಿರುವ ಸುವಾರ್ತೆಯ ಸತ್ಯವಾಕ್ಯದಿಂದ ಮೊದಲೇ ಕೇಳಿದಿರಿ.**

### "ಪರಲೋಕದಲ್ಲಿ ನಿಮಗೋಸ್ಕರ ಸಿದ್ಧವಾಗಿರುವ ಮಹಾಪದವಿಯನ್ನು ನೆನಸುತ್ತಾ"

ವ್ಯಾಖ್ಯಾನಕಾರರು ಪೌಲನ **ನಿಮಿತ್ತವಾಗಿ** ಎಂಬ ಪದದ ಬಳಕೆಯನ್ನು ಅರ್ಥಮಾಡಿಕೊಳ್ಳಲು ಪ್ರಯಾಸ ಪಟ್ಟಿದ್ದಾರೆ. ಅದು ನಂಬಿಕೆ ಮತ್ತು ಪ್ರೀತಿಗೆ ನಿರೀಕ್ಷೆಯನ್ನೆ

ತಳಹದಿಯನ್ನಾಗಿ ಮಾಡುವಂತೆ ತೋರುತ್ತದೆ: "ಪೌಲನು ಬಳಸುವ ಪರಿಭಾಷೆಯು ನಮ್ಮ ನಿರೀಕ್ಷೆಯನ್ನು ನಂಬಿಕೆ ಹಾಗೂ ಪ್ರೀತಿಯ ಪರಿಣಾಮವೆಂದು ಯೋಚಿಸುವದನ್ನು ನಿಷೇಧಿಸುತ್ತದೆ, ಆದರೆ ಬದಲಾಗಿ ಅದು ಹಿಮ್ಮೊಗವಾಗಿರುತ್ತದೆ."[10]

ತಾವು ಸಮಸ್ಯೆಯೆಂದು ಪರಿಗಣಿಸುವಂಥ ಅದನ್ನು ಪೌಲನು ಸ್ತೋತ್ರ ಮಾಡುವದಕ್ಕೆ ನಿರೀಕ್ಷೆಯನ್ನಷ್ಟೆ ತಳಹದಿಗೊಳಿಸುವ ರೀತಿಯಲ್ಲಿ ವಾಕ್ಯಗಳನ್ನು ಮರು – ವ್ಯವಸ್ಥೆಗೊಳಿಸುವ ಮೂಲಕ ಅಳಿಸಿ ಹಾಕುವದಕ್ಕೆ ಕೆಲವರು ಪ್ರಯತ್ನಿಸಿದ್ದಾರೆ. "ನಂಬಿಕೆ"ಯು ದೇವರ ವಾಕ್ಯವನ್ನು ಕೇಳುವ ಮೂಲಕ ಬರಬಲ್ಲದು (ರೋಮಾ 10:17; ನೋಡಿರಿ ಯೋಹಾನ 17:20), ಮತ್ತು "ಪ್ರೀತಿ"ಯು ದೇವರ ಪ್ರೀತಿಗೆ ಒಂದು ಪ್ರತ್ಯುತ್ತರವಾಗಿರಬಲ್ಲದು (1 ಯೋಹಾನ 4:9). ಈ ಸದ್ಗುಣಗಳು ನಿರೀಕ್ಷೆಯ ಮೇಲೆ ಸಹ ಆಧಾರವಾಗಿರಬಹುದು. ಒಂದು ಉರಿಯುತ್ತಿರುವ ಕಟ್ಟಡದಲ್ಲಿರುವ ಜನರು ತಮ್ಮನ್ನು ಪ್ರೀತಿಸುವವರು ಬಂದು ಕಾಪಾಡುವರೆಂದು ಪ್ರೀತಿಯ ಮೇಲೆ ತಮ್ಮ ನಿರೀಕ್ಷೆಯನ್ನು ಕಟ್ಟಿಕೊಳ್ಳಬಹುದು. ಅಲ್ಲದೆ ಅವರು ಈ ಅಪಾಯದಿಂದ ತಮ್ಮನ್ನು ಕಾಪಾಡುವದಕ್ಕೆ ಸಾಮರ್ಥ್ಯ ಹೊಂದಿರುವಂತ ಅಗ್ನಿಶಾಮಕದವರ ಮೇಲೆ ಭರವಸೆಯಿಟ್ಟವರಾಗಿ, ತಮ್ಮ ನಿರೀಕ್ಷೆಯನ್ನು ನಂಬಿಕೆಯ ಮೇಲೆ ಸಹ ಕಟ್ಟಿಕೊಳ್ಳಬಹುದು. ನಿರೀಕ್ಷೆಯು ಪ್ರೀತಿ ಮತ್ತು ನಂಬಿಕೆಯ ಮೇಲೆ ಆಧಾರಗೊಂಡಿರಬಹುದಾಗಿದೆ.

**ನಿರೀಕ್ಷೆ** – (ἐλπίς, *elpis*), "ಎದುರು ನೋಡುವಿಕೆ" ಶ್ರೇಷ್ಠ ಕ್ರೈಸ್ತ ಸದ್ಗುಣಗಳಲ್ಲೊಂದಾಗಿದೆ. ಅದೊಂದು ಹಾರೈಕೆಯ ಆಲೋಚಿಸುವಿಕೆ ಅಲ್ಲ, ಆದರೆ ದೃಢವಿಶ್ವಾಸದ ಎದುರು ನೋಡುವಿಕೆ ಮತ್ತು ನಂಬಿಕೆಯ ಮೇಲೆ ಕಟ್ಟಲ್ಪಟ್ಟಿರುವ ಪೂರ್ಣ ನಿಶ್ಚಯ ಆಗಿರುತ್ತದೆ (ಇಬ್ರಿಯ 11:1). ಹೀಗೆ ನಿರೀಕ್ಷೆಯು ದೇವರಲ್ಲಿ ಮತ್ತು ಯೇಸುವಿನಲ್ಲಿ ಇಟ್ಟಿರುವ (ಅಪೊಸ್ತಲರ ಕೃತ್ಯಗಳು 24:15; 1 ಥೆಸಲೋನಿಕ 1:3; 1 ತಿಮೊಥೆ 1:1; 1 ಪೇತ್ರ 1:21) ನಂಬಿಕೆಯ ಫಲಿತವಾಗಿರುತ್ತದೆ (ಗಲಾತ್ಯ 5:5). ಅಲ್ಲದೆ ಶಾಸ್ತ್ರಗಳಲ್ಲಿ ಬರೆಯಲ್ಪಟ್ಟದ್ದರಲ್ಲಿ ಮತ್ತು ಸುವಾರ್ತೆಯಲ್ಲಿ ಪ್ರಕಟವಾದ ಸತ್ಯಗಳಲ್ಲಿ ಸಹ ನಂಬಿಕೆಯಿಡಲ್ಪಡುತ್ತದೆ (ರೋಮಾ 15:4; ಕೊಲೊಸ್ಸೆ 1:23). ಯೇಸುವಿನ ಪುನರುತ್ಥಾನವು ನಮಗೆ ಒಂದು ಪುನರುತ್ಥಾನದ ನಿರೀಕ್ಷೆಯನ್ನು ಒದಗಿಸುತ್ತದೆ (ಅಪೊಸ್ತಲರ ಕೃತ್ಯಗಳು 23:6; 1 ಪೇತ್ರ 1:3, 4). ಎಲ್ಲಾ ಕ್ರೈಸ್ತರು ಒಂದೇ ನಿರೀಕ್ಷೆಯಲ್ಲಿ ಪಾಲುಗಾರರಾಗಿದ್ದಾರೆ – ಅದು ರಕ್ಷಣೆಯ ಏಕೈಕ ನಿರೀಕ್ಷೆಯಾಗಿದ್ದು ನಿತ್ಯಜೀವವನ್ನು ಸಾಧ್ಯಗೊಳಿಸುತ್ತದೆ (ಕೊಲೊಸ್ಸೆ 1:5; 1 ಥೆಸಲೋನಿಕ 5:8; ತೀತನಿಗೆ 1:2; 3:7). ಯಾವ ಯೋಗ್ಯತೆಗಳಿಲ್ಲದಿದ್ದರೂ ದಯೆಯನ್ನು ಒದಗಿಸುವ ದೇವರ ಕೃಪೆಯು ನಿರೀಕ್ಷೆಯನ್ನು ಕೊಡಬಲ್ಲದು (2 ಥೆಸಲೋನಿಕ 2:16; 1 ಪೇತ್ರ 1:13), ಮತ್ತು ಆ ನಿರೀಕ್ಷೆಯು ರಕ್ಷಣೆ ಹೊಂದುವಂತೆಯೂ ಶುದ್ಧ ಜೀವಿತಗಳನ್ನು ನಡಿಸುವಂತೆಯೂ ಜನರನ್ನು ಸ್ಫೂರ್ತಿಗೊಳಿಸಬಲ್ಲದು (ರೋಮಾ 8:24; 1 ಯೋಹಾನ 3:3). ನಿರೀಕ್ಷೆಯು ಕ್ರೈಸ್ತರು ಸಂತೋಷಿಸಬಹುದಾದ ದೃಢನಿಶ್ಚಯವನ್ನು (ಇಬ್ರಿಯ 6:11) ಒದಗಿಸುತ್ತದೆ (ರೋಮಾ 5:2; 12:12). ಅಂಥ ನಿರೀಕ್ಷೆಯನ್ನು ಹೊಂದಿದವನಾಗಿ, ಒಬ್ಬನು ಕ್ರಿಸ್ತನಲ್ಲಿ ತಾನಿಟ್ಟಿರುವ ನಂಬಿಕೆಯ ವಿಷಯದಲ್ಲಿ ನಾಚಿಕೆ ಪಟ್ಟುಕೊಳ್ಳುವದಿಲ್ಲ (ರೋಮಾ 1:16). ಅದು ಆತ್ಮಕ್ಕೆ ಲಂಗರ ಆಗಿದೆ (ಇಬ್ರಿಯ 6:18, 19).

ಒಂದಕ್ಕೋಸ್ಕರ ನಿರೀಕ್ಷೆ ಪಡಲಿಲ್ಲವೆಂದಾದರೆ, ಬಹಳಷ್ಟು ಸಾರಿ ಅದನ್ನ

ಸಂಪಾದಿಸಿಕೊಳ್ಳಲು ಯಾವದೇ ಪ್ರಯಾಸವು ಮಾಡಲ್ಪಡುವದಿಲ್ಲ. ಹೇಗೂ, ನಿರೀಕ್ಷೆಯು ತನ್ನಷ್ಟಕ್ಕೆ ಮಾತ್ರವಿದ್ದಲ್ಲಿ, ಅದು ಬೆಲೆಯಿಲ್ಲದ್ದಾಗುತ್ತದೆ; ನಿರೀಕ್ಷೆಯ ಜೊತೆಯಲ್ಲಿ "ಪ್ರೀತಿ"ಯ ಮೂಲಕ ಕ್ರಿಯೆ ಮಾಡುವ "ನಂಬಿಕೆ"ಯು ಇರತಕ್ಕದ್ದು (ಗಲಾತ್ಯ 5:6). ಪ್ರೀತಿ ಮತ್ತು ನಂಬಿಕೆಗಳ ಮೇಲೆ ಕಟ್ಟಡುತ್ತಿರುವದಾಗಿದೆ, ನಿರೀಕ್ಷೆಯು ದೇವರ ಕೃಪೆಯ ಮೇಲೆ ಸ್ಥಾಪಿಸ್ಪಟ್ಟಿರುತ್ತದೆ (1 ಪೇತ್ರ 1:13). ನಿರೀಕ್ಷೆಯು ಕಟ್ಟಲ್ಪಟ್ಟಿರುವ ಕೃಪೆಯ ಬಳಿಗೆ ನಂಬಿಕೆಯು ಸಂಪರ್ಕವನ್ನು ಒದಗಿಸುತ್ತದೆ.

ಕ್ರೈಸ್ತರಾಗಿ, ನಾವು ಯಾವದನ್ನು ಹೊಂದಿಲ್ಲವೋ ಮತ್ತು ಯಾವದನ್ನು ಇನ್ನೂ ಸಿದ್ಧಿಸಿಕೊಂಡಿಲ್ಲವೋ ಅದನ್ನು ಪಡೆದುಕೊಳ್ಳುವ ನಿರೀಕ್ಷೆಯನ್ನು ಹೊಂದಿದ್ದೇವೆ. ನಾವು ಅದನ್ನು ಈಗಾಗಲೆ ಹೊಂದಿಕೊಂಡಿದ್ದರೆ, ನಾವು ಇನ್ನು ಮೇಲೆ ಅದಕ್ಕಾಗಿ ಎದುರುನೋಡುವವರಾಗುವದಿಲ್ಲ (ರೋಮಾ 8:24). ನಿರೀಕ್ಷೆ ದೇವರ ವಿಶೇಷ ಗುಣವಲ್ಲ ಯಾಕೆಂದರೆ ಮನುಷ್ಯರು ಎಷ್ಟು ಖಚಿತತೆಯಿಂದ ಗತಕಾಲವನ್ನು ತಿಳಿದವರಾಗಿರುತ್ತಾರೋ ಅಷ್ಟೇ ಖಚಿತತೆಯಿಂದ ದೇವರು ಭವಿಷ್ಯವನ್ನು ತಿಳಿದಿರುವವನಾಗಿದ್ದಾನೆ. ಇಲ್ಲಿ ಸಮೃದ್ಧಿಯಾದ ಜೀವನವನ್ನು ಆನಂದಿಸುವದರ ಜೊತೆಗೆ (ಯೋಹಾನ 10:10), ಯೇಸುವಿಗಾಗಿ ಜೀವಿಸುವದಕ್ಕೋಸ್ಕರ ಪರಲೋಕದ ನಿರೀಕ್ಷೆಯು ಸಹ ಒಂದು ಪ್ರೇರಕ ಶಕ್ತಿಯಾಗಿರುತ್ತದೆ. ಈಗಿನ ಜೀವಿತವು ಕ್ರಿಸ್ತನ ಸೇವಕರು ಎದುರು ನೋಡುವಂಥ ಬರಲಿರುವ ಮಹಿಮೆಯುಳ್ಳ ಜೀವಿತದ ಒಂದು ಮುನ್‌ರುಚಿ ಆಗಿರುತ್ತದೆ. ಈಗಿನ ಆಶೀರ್ವಾದಗಳು ನಾವು ಎದುರು ನೋಡುವಂಥ ಇನ್ನಷ್ಟು ಅಧಿಕ ಆನಂದಕರವಾದ ಭವಿಷ್ಯದ ಒಂದು ಆರಂಭವಷ್ಟೆ ಆಗಿರುತ್ತವೆ.

ಕ್ರೈಸ್ತರು **ಪರಲೋಕದಲ್ಲಿ . . . ಸಿದ್ಧವಾಗಿರುವ** ಒಂದು ನಿರೀಕ್ಷೆಯನ್ನು (ಪದವಿಯನ್ನು) ಹೊಂದಿದ್ದಾರೆ. "ಸಿದ್ಧವಾಗಿರುವ" (ἀπόκειμαι, *apokeimai*) ಎಂದರೆ "ಎತ್ತಿ ಇಡು" (ಲೂಕ 19:20), "ಕೂಡಿಸಿಟ್ಟ," ಅಥವಾ "ಕಾದಿಟ್ಟಿರುವ" ಎಂದರ್ಥವಾಗಿದೆ. ಆ ಗ್ರೀಕ್ ಪದವೇ 2 ತಿಮೊಥೆ 4:8 ಮತ್ತು ಇಬ್ರಿಯ 9:27ರಲ್ಲಿ ಕಾಣಿಸಿಕೊಳ್ಳುತ್ತದೆ, ಅಲ್ಲಿ ಅದು ನೇಮಕವಾಗಿದೆ ಎಂದು ಅನುವಾದಿಸಲ್ಪಟ್ಟಿರುತ್ತದೆ. ಕ್ರಿಸ್ತನಿಗೆ ಸೇರಿದವರಿಗೆ ಪರಲೋಕದಲ್ಲಿ ಒಂದು ಸ್ಥಳವು ಕಾದಿರಿಸಲ್ಪಟ್ಟಿರುತ್ತದೆ. ಅಂಥ ಒಂದು ಭರವಸೆಯು ಕ್ರೈಸ್ತರಿಗೆ ಪರಲೋಕದ ನಿರೀಕ್ಷೆಯನ್ನು ಒದಗಿಸುತ್ತದೆ. ಪೌಲನು ಹೀಗೆ ಬರೆದನು, "ನಾವಾದರೋ ಪರಲೋಕದ ಸಂಸ್ಥಾನದವರು" (ಫಿಲಿಪ್ಪಿ 3:20). ಕ್ರೈಸ್ತರು ಪರಲೋಕದ ನಾಗರಿಕರು. ಇದರರ್ಥವುಭೂಮಿಯ ಮೇಲೆ ನಾವು ನಮ್ಮ ಮನೆಯಿಂದ ಬೇರ್ಪಟ್ಟಟವರಾಗಿರುವ ಪ್ರವಾಸಿಗಳೂ ಪರದೇಶಸ್ಥರೂ ಆಗಿದ್ದು ನಮ್ಮ ಸುತ್ತಿಲಿನ ಸ್ಥಳೀಯರಂತೆ ಇರುವವರಲ್ಲ (1 ಪೇತ್ರ 2:11).

ಗ್ರೀಕ್ ಪದವಾದ οὐρανοί (*ouranoi* — ಅಕ್ಷರಶಃ, "ಪರಲೋಕಗಳು," ಬಹುವಚನ) ಹೊಸ ಒಡಂಬಡಿಕೆಯಲ್ಲಿ ಸತತವಾಗಿ ಕಾಣಿಸಿಕೊಳ್ಳುತ್ತದೆ, ಅದರರ್ಥವು "ಪರಲೋಕ" ಎಂದಾಗಿರುತ್ತದೆ. ಕೊಲೊಸ್ಸೆಯವರಿಗಿದ್ದ ಪರಲೋಕದ ನಿರೀಕ್ಷೆಯು ಅವರಿಗೆ ಪೌಲನಿಂದ ಪರಿಚಯಿಸಲ್ಪಡಲಿಲ್ಲ. ಅವರು ಮುಂಚೆಯೇ ಬಹು ಸಂಭಾವ್ಯವಾಗಿ ಎಪಫ್ರನ ಬೋಧನೆ ಮೂಲಕ ಸುವಾರ್ತೆಯನ್ನು ಕೇಳಿದ್ದರು ಮತ್ತು ಪರಲೋಕದ ನಿರೀಕ್ಷೆಯನ್ನು ಬೆಳೆಸಿಕೊಂಡಿದ್ದರು.

"ಪರಲೋಕ" ಎಂಬುದು ಬೈಬಲಿನಲ್ಲಿ ಮೂರು ಅರ್ಥಗಳಲ್ಲಿ ಬಳಸಲ್ಪಟ್ಟಿದೆ.

ಮೊದಲನೆಯ ಪರಲೋಕವು ಭೂಮಿಯ ಸುತ್ತಲಿರುವ ವಾಯುಮಂಡಲ – ಅಲ್ಲಿ ಮೋಡಗಳು ತೇಲಾಡುವವು, ಬೆಂಕಿ ಎದ್ದೇಳುವದು, ಮತ್ತು ವಿಮಾನಗಳು ಹಾಗೂ ಪಕ್ಷಿಗಳು ಹಾರಾಡುವವು (ಮತ್ತಾಯ 6:26; 8:20) ಎರಡನೆಯ ಪರಲೋಕವು ನಕ್ಷತ್ರಗಳು ಮತ್ತು ತಾರಾಗಣಗಳಿರುವ ಮಂಡಲವಾಗಿದೆ (ಮತ್ತಾಯ 24:29). ಮೂರನೆಯ ಪರಲೋಕವು ದೇವರ ಮತ್ತು ದೇವದೂತರ ಸಮೂಹಗಳ ವಾಸಸ್ಥಳವಾಗಿದೆ (ಮತ್ತಾಯ 6:9; 18:10).

ಕ್ರೈಸ್ತರ ನಿರೀಕ್ಷೆಯು ಯೇಸುವಿನೊಂದಿರುವದೇ ಆಗಿದೆಯೋ (ಯೋಹಾನ 14:3). ಇದು 2 ಕೊರಿಂಥ 12:2ರಲ್ಲಿ ಉಲ್ಲೇಖಿಸಲಾಗಿರುವ ಮೂರನೆಯ ಪರಲೋಕ ಎಂದು ತೋರುತ್ತದೆ. ಪರಲೋಕವು ಒಂದು ಆತ್ಮೀಕ ಸ್ಥಳವಾಗಿದ್ದು ಅಲ್ಲಿ ಮಾಂಸ ಮತ್ತು ರಕ್ತ ಪ್ರವೇಶಿಸಲು ಸಾಧ್ಯವಿಲ್ಲ; ಅಲ್ಲಿ ಹೋಗುವವರು ಮಾರ್ಪಡುವರು (1 ಕೊರಿಂಥ 15:50–53). ಪರಲೋಕದಲ್ಲಿರುವವರು ಆತ್ಮೀಕ ದೇಹಗಳನ್ನು ಹೊಂದಿರುವರು (1 ಕೊರಿಂಥ 15:44), ಕ್ರಿಸ್ತನಂತಾಗುವರು (ಫಿಲಿಪ್ಪಿ 3:21) ಮತ್ತು ದೇವರಂತೆ ಇರುವರು (1 ಯೋಹಾನ 3:2). ದೇವರು ಆತ್ಮಸ್ವರೂಪನು (ಯೋಹಾನ 4:24), ಮತ್ತು ಆತ್ಮೀಕ ಜೀವಿಗಳಿಗೆ ಮಾಂಸ ಮತ್ತು ಮೂಳೆಗಳು ಇರುವದಿಲ್ಲ (ಲೂಕ 24:39).

ಆತ್ಮೀಕವಾದ, ಪರಲೌಕಿಕ ಮಂಡಲವು ಕಣ್ಣಿಗೆ ಕಾಣುವದಕ್ಕೆ ಸಾಧ್ಯವಿಲ್ಲ ಮತ್ತು ಅದು ನಿತ್ಯವಾದದ್ದು, ಅದು ಶಾರೀರಿಕ ಮಂಡಲದಂತಲ್ಲ, ಶಾರೀರಕ ಮಂಡಲವನ್ನು ನೋಡಬಹುದಾಗಿದೆ ಮತ್ತು ಅದು ನಿತ್ಯವಾದದ್ದಲ್ಲ (2 ಕೊರಿಂಥ 4:18). ಅದರ ಆತ್ಮೀಕ ಸ್ವಭಾವದ ಕಾರಣದಿಂದ, ಪರಲೋಕ ಮಂಡಲವನ್ನು ಶಾರೀರಿಕ ಸಂಗತಿಗಳಿಂದ ವರ್ಣಿಸಲಾಗದು, ಆದರೆ ಅದು ಶಾರೀರಿಕವಾದದ್ದರೊಂದಿಗೆ ಹೋಲಿಕೆ ಮಾಡಲ್ಪಡಬಲ್ಲದ್ದಾಗಿದೆ. ಪ್ರಾಮುಖ್ಯವಾದ ವಾಸ್ತವಾಂಶವೇನೆಂದರೆ ದೇವರ ಸಂಗಡ ಪರಲೋಕದಲ್ಲಿರುವವರು ಕೇವಲ ಸಂತೋಷವನ್ನು ಹೊಂದುವರು, ಯಾಕೆಂದರೆ ಅಲ್ಲಿ ದುಃಖವಾಗಲಿ ಗೋಳಾಟವಾಗಲಿ, ಅಥವಾ ಪರಲೋಕದಲ್ಲಿ ಮರಣವಾಗಲಿ ಇರುವದಿಲ್ಲ (ಪ್ರಕಟನೆ 21:3, 4). ಅದು “ಲಯ ಕಳಂಕ ಕ್ಷಯಗಳಿಲ್ಲದ” ಸ್ಥಳವಾಗಿರುತ್ತದೆ (1 ಪೇತ್ರ 1:4). ಕೊಲೊಸ್ಸೆಯವರು ಈ ಮಂಡಲಕ್ಕೆ ಹೋಗುವದಕ್ಕೆ ನಿರೀಕ್ಷಿಸಿದರು ಮತ್ತು ಎಲ್ಲಾ ಕ್ರೈಸ್ತರು ಅಲ್ಲಿಗೆ ಹೋಗುವದಕ್ಕೆ ನಿರೀಕ್ಷೆ ಪಡಬಹುದು.

ಪೌಲನು ಕೊಲೊಸ್ಸೆಯವರಿಗೆ ಕ್ರೈಸ್ತ ಜೀವನದ ಕುರಿತ ಒಂದು ಸಮರ್ಪಕವಾದ ದೃಷ್ಟಿಕೋನವನ್ನು ಒದಗಿಸುವದಕ್ಕೆ ಪ್ರಯತ್ನಿಸುತ್ತಿದ್ದಿರಬೇಕು. ಅವರ ನಿರೀಕ್ಷೆಯು ಈ ಜೀವನದಲ್ಲಿನ ಆಶೀರ್ವಾದಗಳಿಗೆ ಮಾತ್ರವೇ ಸಿಮೀತವಾಗಿರಲಿಲ್ಲ. ಬದಲಾಗಿ, ಆ ಸಹೋದದರು ಎರಡೂ ಲೋಕಕಗಳಿಗೆ ಸೇರಿದ ಅತ್ಯುತ್ತಮವಾದವುಗಳನ್ನೇ ಹೊಂದಿದ್ದರು: ಈಗಿನ ಲೋಕದಲ್ಲಿ ಕ್ರಿಸ್ತನ ಸಂಗಡ ಜೀವಿತವನ್ನು ಆನಂದಿಸುವದು ಮತ್ತು ಮರಣಾನಂತರದ ಜೀವನದಲ್ಲಿ ಆತನೊಂದಿಗೆ ಪರಲೋಕದಲ್ಲಿರುವ ನಿರೀಕ್ಷೆ.

## “ನೀವು ಆ ಪದವಿಯನ್ನು ಕುರಿತು ನಿಮ್ಮ ಬಳಿಗೆ ಬಂದಿರು ಸುವಾರ್ತೆಯ ಸತ್ಯವಾಕ್ಯದಿಂದ ಮೊದಲೇ ಕೇಳಿದಿರಿ”

“ಸತ್ಯ” (ἀλήθεια, *alētheia*) ಎಂಬುದು ಸಂಪೂರ್ಣ ವಾಸ್ತವಾಂಶವನ್ನು, ಸಂಪೂರ್ಣವಾಗಿ ವಿಶ್ವಾಸರ್ಹವಾಗಿರಬಲ್ಲ ಮಾಹಿತಿ – ಸುಳ್ಳು ಮತ್ತು ವಿಶ್ವಾಸರ್ಹವಲ್ಲದ್ದರ ವಿರುದ್ಧವಾದ ಸಂಗತಿಯನ್ನು ಸೂಚಿಸುತ್ತದೆ. **ಸತ್ಯವಾಕ್ಯ** ಎಂಬುದು ಹೊಸ

ಒಡಂಬಡಿಕೆಯಲ್ಲಿ ಒಂದು ಪ್ರಾಮುಖ್ಯವಾದ ಭಾವನೆ ಆಗಿರುತ್ತದೆ. ಮತ್ತಾಯ ಮತ್ತು ಮಾರ್ಕರು ಯೇಸು "ಸತ್ಯ" ಎಂಬ ಪದವನ್ನು ಬಳಸಿದ್ದಾಗಿ ಬರೆಯಲಿಲ್ಲ, ಆದರೆ ಲೂಕನು ಆತನು ಹೀಗೆ ಹೇಳಿದ್ದಾಗಿ ಉಲ್ಲೇಖಿಸುತ್ತಾನೆ, "ಎಲೀಯನ ಕಾಲದಲ್ಲಿ ಮೂರು ವರುಷ ಆರು ತಿಂಗಳು ಮಳೆಬಾರದೆ ದೇಶದಲ್ಲೆಲ್ಲಾ ದೊಡ್ಡ ಬರ ಉಂಟಾದಾಗ ಇಸ್ರಾಯೇಲ್ ಜನರಲ್ಲಿ ಎಷ್ಟೋ ಮಂದಿ ವಿಧವೆಯರು ಇದ್ದದ್ದು ನಿಜ" (ಲೂಕ 4:25). ಯೋಹಾನನು ತನ್ನ ಮುನ್ನುಡಿಯಲ್ಲಿ, ಯೇಸು ಸತ್ಯದ ಮೂಲ ಆಗಿದ್ದಾನೆ ಮತ್ತು ಸತ್ಯವನ್ನು ಕೈಕೊಂಡು ನಡೆಯುವವರು ಬೆಳಕಿನೊಳಗೆ ಬರುವವರಾಗಿದ್ದಾರೆ (ಯೋಹಾನ 1:14, 17; 3:21).

ಯೇಸು ಸತ್ಯದ ಮೂಲ ಆಗಿದ್ದಾನೆ (ಯೋಹಾನ 14:6; ಎಫೆಸ 4:21). ಧರ್ಮಶಾಸ್ತ್ರವು ವಾಸ್ತವಿಕತೆಯ ಛಾಯೆಯಾಗಿತ್ತು (ಇಬ್ರಿಯ 10:1, 2), ಆದರೆ ಅದು ನಿಜಸ್ವರೂಪ ಆಗಿರಲಿಲ್ಲ (ಕೊಲೊಸ್ಸೆ 2:17). ಮೋಶೆಯು ಧರ್ಮಶಾಸ್ತ್ರವನ್ನು ತಂದನು, ಆದರೆ ಯೇಸುವಿನಿಂದ ಕೃಪೆಯೂ ಸತ್ಯವೂ ಬಂದವು. ಸತ್ಯದ ವಿಷಯವಾಗಿ ಯೇಸು ಸಾಕ್ಷಿ ಹೇಳಿದನು (ಯೋಹಾನ 18:37), ಮತ್ತು ಸತ್ಯದ ಕುರಿತಾದ ಆತನ ವೈಯಕ್ತಿಕ ಬೋಧನೆಯು ಯೋಹಾನನ ಪುಸ್ತಕದ ಉಳಿದ ಭಾಗದಲ್ಲಿ ಸೇರ್ಪಡೆಗೊಳಿಸಲ್ಪಟ್ಟಿರುತ್ತದೆ.

ದೇವರು ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಲ್ಪಡತಕ್ಕದ್ದು ಎಂಬ ವಾಸ್ತವಾಂಶದಲ್ಲಿ ಸತ್ಯದ ಪ್ರಾಮುಖ್ಯತೆಯನ್ನು ಕಾಣಬಹುದಾಗಿದೆ (ವ.5b; ಯೋಹಾನ 4:23, 24). ಜನರು ಸತ್ಯದ ಮೂಲಕ ಪಾಪದಿಂದ ಬಿಡುಗಡೆಗೊಳಿಸಲ್ಪಡುತ್ತಾರೆ (ಯೋಹಾನ 8:32), ಮತ್ತು ಹೃದಯಗಳು ಸತ್ಯದಿಂದ ಶುದ್ಧಗೊಳಿಸಲ್ಪಡುತ್ತವೆ (1 ಪೇತ್ರ 1:22). ಸುಳ್ಳುಗಳು ಪಿಶಾಚನಿಂದ ಬರುತ್ತವೆ ಯಾಕೆಂದರೆ ಆತನಲ್ಲಿ ಯಾವದೇ ಸತ್ಯವೂ ಇರುವದಿಲ್ಲ (ಯೋಹಾನ 8:44). ಆತ್ಮೀಕ ಸತ್ಯವು ಸತ್ಯದ ಆತ್ಮನಾದ ಪವಿತ್ರಾತ್ಮನಿಂದ ಪ್ರಕಟಗೊಳಿಸಲ್ಪಟ್ಟ ದೇವರ ವಾಕ್ಯದಲ್ಲಿ ಮಾತ್ರವೇ ಸಿಕ್ಕಬಲ್ಲದು. ಯೇಸುವಿನ ಬೋಧನೆಗಳಲ್ಲಿ ಮುಂದುವರೆಯುವರು ಸತ್ಯವನ್ನು ತಿಳಿಯಬಲ್ಲವರಾಗಿದ್ದಾರೆ. ಅನೇಕ ಸುಳ್ಳು ಬೋಧಕರು ಲೋಕದಲ್ಲಿ ಬಂದಿದ್ದಾರೆ (1 ಯೋಹಾನ 4:1), ಆದರೆ ಕ್ರೈಸ್ತರು ಅವರ ಭೋಧನೆಗಳನ್ನು ದೇವರು ಸತ್ಯವನ್ನು ಪ್ರಕಟಗೊಳಿಸಲ್ಪಟ್ಟಿರುವವರ ವಾಕ್ಯಗಳ ಮೂಲಕ ವಿವೇಚಿಸಿ ತಿಳುಕೊಳ್ಳತಕ್ಕದ್ದು (1 ಯೋಹಾನ 4:6). ದೇವರ ನ್ಯಾಯತೀರ್ಪು ಸತ್ಯಕ್ಕನುಗುಣವಾಗಿರುವದು (ರೋಮಾ 2:2; KJV; NKJV; NIV).

**ಕೇಳಿದಿರಿ** ಎಂಬ ಪದವು 5, 6, 9, ಮತ್ತು 23 ವಚನಗಳಲ್ಲಿ ಪೌಲನು ಪುನರಾವರ್ತನೆ ಮಾಡುವದು ಅವರ ನಂಬಿಕೆ ಮತ್ತು ನಿರೀಕ್ಷೆಗಳು ದೇವರ ವಾಕ್ಯವನ್ನು ಮೌಖಿಕವಾಗಿ ತಿಳಿಯಪಡಿಸಿದ್ದರಿಂದಲೇ ದೊರಕಿದವು ಎಂಬುದನ್ನು ವಾಚಕರಿಗೆ ಜ್ಞಾಪಕಗೊಳಿಸುವದಾಗಿತ್ತು. ಅವರ ನಂಬಿಕೆ ಹಾಗೂ ನಿರೀಕ್ಷೆಗಳು ಲಿಖಿತ ದಸ್ತಾವೇಜುಗಳ ಮೇಲೆ ಆಧಾರವಾಗಿರಲಿಲ್ಲ, ಆದರೆ ಅವರು ಕೇಳಿದ್ದರ ಮೇಲೆ ಆಧಾರವಾಗಿತ್ತು.

## "ಸುವಾರ್ತೆಯ"

ಗ್ರೀಕ್ ಪದವಾದ **ಸುವಾರ್ತೆ** (εὐαγγέλιον, *euangelion*) ಎಂಬುದರ ಅರ್ಥವು "ಶುಭವಾರ್ತೆ." ಇದು ಪೌಲನ ಪತ್ರಿಕೆಗಳಲ್ಲಿ ಒಂದು ಪ್ರಾಮುಖ್ಯವಾದ ಪದವಾಗಿದ್ದು, ಸುಮಾರು ಅರುವತ್ತು ಸಾರಿ ಕಾಣಿಸಿಕೊಳ್ಳುತ್ತದೆ. ಸುವಾರ್ತೆಯು ಯೇಸುವಿನ ಮರಣ, ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳನ್ನು ಒಳಗೊಂಡಿರುತ್ತದೆ (1 ಕೊರಿಂಥ 15:1-4).

ಹೇಗೂ, ಆತನ ಮರಣ, ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳ ಸುದ್ದಿಯು ಒಂದು ವಾಸ್ತವಿಕತೆಯಾಗಿ ಸಾರಲ್ಪಡುವದಕ್ಕೆ ಮುನ್ನ, ಸುವಾರ್ತೆಯು ಸಾರಲ್ಪಟ್ಟಿದೆ ಎಂದು ಯೇಸು ಹೇಳಿದನು (ಮತ್ತಾಯ 11:5). ಆ ಕಾಲದಲ್ಲಿ ಸಾರಲ್ಪಡುತ್ತಿದ್ದ "ಶುಭವಾರ್ತೆ"ಯು ಪರಲೋಕ ರಾಜ್ಯವು ಸಮೀಪವಾಯಿತು ಎಂಬದರ ಕುರಿತಾಗಿತ್ತು (ಮತ್ತಾಯ 4:17). ಇದು ಶೀಘ್ರವೇ ಸ್ಥಾಪಿಸಲ್ಪಡಲಿದ್ದ ಕ್ರಿಸ್ತನ ರಾಜ್ಯದ ಕುರಿತ "ಸುವಾರ್ತೆ" ಆಗಿತ್ತು (ಮತ್ತಾಯ 4:23; 9:35; ಮಾರ್ಕ 1:14). ಲೂಕನು "ಸುವಾರ್ತೆ ಸಾರು" ಎಂಬ ಅರ್ಥವನ್ನು ಕೊಡುವ εὐαγγελίζομαι (*euangelizomai*) ಎಂಬ ಪದದ ಕ್ರಿಯಾಪದ ರೂಪವನ್ನು ಬಳಸಿದನು (ಲೂಕ 4:18; ನೋಡಿರಿ 3:18; 4:43); ಆದರೆ ಆತನು "ಸುವಾರ್ತೆ" ಎಂಬ ನಾಮಪದವನ್ನು ಬಳಸಲಿಲ್ಲ. ಯೋಹಾನನು ಎರಡರಲ್ಲಿ ಯಾವದನ್ನು ಸೇರ್ಪಡೆಗೊಳಿಸಲಿಲ್ಲ; ಆದರೆ ಬಹುಶಃ "ಸುವಾರ್ತೆ" ಎಂಬುದನ್ನು "ಸತ್ಯ"ದೊಂದಿಗೆ ಸರಿಗಟ್ಟಬಹುದಾಗಿದೆ (ನೋಡಿರಿ ಎಫೆಸ 1:13), ಅದನ್ನು ಯೋಹಾನನು ಪದೇ ಪದೇ ಬಳಿಸಿದನು.

ವಾಸ್ತವಿಕತೆಯಲ್ಲಿ, ಸುವಾರ್ತೆಯು ಯೇಸುವಿನ ಮರಣ. ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳಿಗಿಂತಲೂ ಹೆಚ್ಚಿನದ್ದಾಗಿದೆ. ಕೊಲೊಸ್ಸೆಯವರು ಪರಲೋಕದ ಕುರಿತು "ಸುವಾರ್ತೆಯ ಸತ್ಯವಾಕ್ಯದಿಂದ" ಕೇಳಿದ್ದರೆಂದು ಪೌಲನು ಬರೆಯುತ್ತಾನೆ. "ಸುವಾರ್ತೆಯ ಸತ್ಯಾರ್ಥವು" ಗಲಾತ್ಯದವರಲ್ಲಿ ಸ್ಥಿರವಾಗಿರಬೇಕೆಂದು ಪೌಲನು ಎಲ್ಲರ ಮುಂದೆ ಪೇತ್ರನನ್ನು ನಿರ್ದಾಕ್ಷಿಣ್ಯವಿಲ್ಲದೆ ಖಂಡಿಸಿದನು (ಗಲಾತ್ಯ 2:5, 14). ಪೌಲನು ಆತನನ್ನು ವಿರೋಧಿಸಿದನು – ಆತನು ಯೇಸುವಿನ ಮರಣ, ಹೂಣಲ್ಪಡುವಿಕೆ ಮತ್ತು ಪುನರುತ್ಥಾನಗಳ ವಿಷಯದಲ್ಲಿ ಅಸಮರ್ಪಕವಾಗಿ ಪ್ರತಿಕ್ರಿಯಿಸುತ್ತಿದ್ದನೆಂಬದಕ್ಕಾಗಿ ಅಲ್ಲ, ಆದರೆ ಆತನು ಅನ್ಯಜನಾಂಗದ ಕ್ರೈಸ್ತರ ಸಹವಾಸದಿಂದ ದೂರ ಇದ್ದನೆಂಬ ಕಾರಣಕ್ಕಾಗಿಯೇ. ಈ ರೀತಿಯಲ್ಲಿ ವರ್ತಿಸುವ ಮೂಲಕ, ಆತನು ಸುವಾರ್ತೆಯ ಸತ್ಯದ ಪ್ರಕಾರವಾಗಿ ನಡಕೊಳ್ಳದವನಾಗಿದ್ದನು. ಸುವಾರ್ತೆಯು ಕ್ರೈಸ್ತರು ಜೀವಿಸಬೇಕಾದ ರೀತಿಯನ್ನು ಒಳಗೊಂಡಿರುತ್ತದೆ (ಫಿಲಿಪ್ಪಿ 1:27), ಅದರಲ್ಲಿ ಪಾಪದ ನಡವಳಿಕೆಯಿಂದ ದೂರವಿರುವದು ಸೇರಿರುತ್ತದೆ (1 ತಿಮೊಥೆ 1:10, 11). ಯೇಸು ಪ್ರಟಕಗೊಳಿಸಿರುವ ಎಲ್ಲಾ ಸತ್ಯವೇ ಸುವಾರ್ತೆಯಾಗಿರುತ್ತದೆ.

ಸುವಾರ್ತೆಯ ಒಂದು ಆಯಾಮವೆಂದರೆ ರಕ್ಷಣೆಯನ್ನು ಪಡೆದುಕೊಳ್ಳಲು ಆರಂಭದಲ್ಲಿ ಮಾಡಬೇಕಾದ ಕಾರ್ಯಗಳಿರುತ್ತವೆ. ಸುವಾರ್ತೆಯು "ದೇವರ ಬಲಸ್ವರೂಪವಾಗಿದ್ದು . . . ರಕ್ಷಣೆ ಉಂಟು ಮಾಡುವಂಥದಾಗಿದೆ" ಎಂದು (ರೋಮಾ 1:16) ಮತ್ತು ಅದನ್ನು ಪ್ರತಿಯೊಂದು ಸೃಷ್ಠಿ ಜೀವಿಗೂ ಸಾರಬೇಕೆಂದು ಯೇಸು ಹೇಳಿದನು (ಮಾರ್ಕ 16:15). ಸುವಾರ್ತೆಗೆ ಒಳಪಡದವರಿಗೆ ಪ್ರತೀಕಾರವನ್ನು ಮತ್ತು ನಿತ್ಯದಂಡನೆಯನ್ನು ಉಂಟು ಮಾಡುವನು (2 ಥೆಸಲೋನಿಕ 1:7–9)

## ಅವರ ನಂಬಿಕೆಯಿಂದುಂಟಾದ ಫಲ (1:6)

**6ನೀವು ದೇವರ ಕೃಪೆಯನ್ನು ಕುರಿತು ಸತ್ಯಾರ್ಥವನ್ನು ಕೇಳಿ ತಿಳುಕೊಂಡ ದಿವಸದಿಂದ ಆ ಸುವಾರ್ತೆಯು ನಿಮ್ಮಲ್ಲಿ ಫಲ ಕೊಟ್ಟು ವೃದ್ಧಿಯಾಗುತ್ತಾ ಬಂದ ಪ್ರಕಾರ ಲೋಕದಲ್ಲೆಲ್ಲಾ ಹಬ್ಬಿ ಫಲಕೊಟ್ಟು ವೃದ್ಧಿಯಾಗುತ್ತಾ ಬರುತ್ತದೆ.**

## “ನಿಮ್ಮ ಬಳಿಗೆ ಬಂದಿರುವ”

ಕ್ರೈಸ್ತತ್ವವು ಪ್ರಾಥಮಿಕ ಹರಡಿರುವದು ಕ್ರೈಸ್ತರು ಸುವಾರ್ತೆಯನ್ನು ಜಗತ್ತಿಗೆಲ್ಲಾ ಸಾರಿದ್ದರಿಂದಲೇ ಹೊರತು ಲೋಕವು ಯೇಸುವಿನ ಬೋಧನೆಗಳನ್ನು ಕಲಿತುಕೊಳ್ಳುವದಕ್ಕೆ ಬಂದದ್ದರಿಂದಲ್ಲ. ಸತ್ಯವು – ಹೀಗೆ ಸುವಾರ್ತೆಯು – ಮಾನವ ತರ್ಕದಿಂದ ಸಾಧಿಸಲ್ಪಡಲಾಗದು. ಬದಲಾಗಿ, ದೇವರು ಅದನ್ನು ಪ್ರಕಟಗೊಳಿಸಿದ್ದರ ಕಾರಣದಿಂದ ಅದು ನಮಗೆ ಲಭ್ಯವಿರುತ್ತದೆ (ಗಲಾತ್ಯ 1:10, 11).

ಸುವಾರ್ತೆಯು ಕೊಲೊಸ್ಸೆಯವರ ಬಳಿಗೆ **ಬಂದಿರುವ** ಎಂಬದಾಗಿ εἰς (*eis,* “ಗೆ”) ಪದವನ್ನು ಬಳಸಿ ಹೇಳುತ್ತಾನೆ. ಈ *eis* ಎಂಬುದರ ಮೂಲ ಅರ್ಥವು “ಒಳಗೆ,” ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಚಲಿಸುವದು, ಒಂದು ಮಂಡಲದಿಂದ ಮತ್ತೊಂದು ಮಂಡಲದೊಳಗೆ, ಮತ್ತು ಒಂದು ದಿಕ್ಕಿನಿಂದ ಮತ್ತೊಂದು ದಿಕ್ಕಿಗೆ ಸಾಗುವದು ಎಂದಾಗಿದೆ. ಹೊಸ ಒಡಂಬಡಿಕೆಯಲ್ಲಿ *eis* ಎಲ್ಲೆಲ್ಲಿ ಕಾಣಿಸಿಕೊಳ್ಳುತ್ತದೋ ಅಲ್ಲೆಲ್ಲಾ ಕ್ರಿಯೆಯಲ್ಲಿ ಆಗಿರಲಿ ಅಥವಾ ಆಲೋಚನೆಯಲ್ಲಾಗಿರಲಿ, ಹಿಮ್ಮುಖ ಚಲನೆಯ ಬದಲಾಗಿ ಮುಂದಕ್ಕೆ ಚಲಿಸುವದು ಎಂಬ ಮೂಲಭೂತ ಅರ್ಥವು ಉಳಿಸಿಕೊಳ್ಳಲ್ಪಡುತ್ತದೆ. ಕೊಲೊಸ್ಸೆಯವರಿಗೆ ಪತ್ರಿಕೆಯಲ್ಲಿ ಪೌಲನು ಅದನ್ನು ಹೇಗೆ ಬಳಸಿಸದನೆಂಬದಕ್ಕೆ ಕೆಲವು ಉದಾಹರಣೆಗಳನ್ನು ಪರಿಗಣಿಸಿರಿ: “ದೇವಜನರ *ಮೇಲಿರುವ*” (1:4): “ತೋರಿಸುವವರಾಗಿರ*ಬೇಕೆಂತಲೂ*” (1:11); “ಪಾಲುಗಾರರಾಗು*ವದಕ್ಕೆ*” (1:12); “ರಾಜ್ಯ*ದೊಳಗೆ*” (1:13); “ಆತನಿಗೋಸ್ಕರ” (1:16); “ಗೆಲ್ಲಾ” (3:15); “. . . *ಹಾಗೆಯೂ*” (4:8). (ಒತ್ತಿ ಹೇಳಿದ್ದು ನನ್ನದು.)

ಇದೇ ಪದವು, *eis* ಯೇಸುವಿನಿಂದ ಬಳಸಲ್ಪಟ್ಟಿತು. ಆತನು ಹೀಗೆ ಹೇಳಿದನು, “ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ, ಇದು ಪಾಪಗಳ ಕ್ಷಮೆಗಾಗಿ [*eis*] ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ” (ಮತ್ತಾಯ 26:28). ಆತನ ರಕ್ತವು ಅನೇಕ ಜನರ ಪಾಪಗಳ ಕ್ಷಮಾಪಣೆಯನ್ನು ಎದುರು ನೋಡುವದಾಗಿ, ಉದ್ದೇಶಕ್ಕಾಗಿ, ಮತ್ತು ಸಾಧ್ಯಗೊಳಿಸುವದಕ್ಕಾಗಿ ಸುರಿಸಲ್ಪಟ್ಟಿತು – ಹೊರತು ಈಗಾಗಲೇ ಕ್ಷಮಿಸಲ್ಪಟ್ಟಿದ್ದ ಪಾಪಗಳ ಕಡೆಗೆ ಹಿಮ್ಮುಖವಾಗಿ ನೋಡುವದಾಗಿರಲಿಲ್ಲ. *Eis* ಮಾರ್ಕ 1:4 ಮತ್ತು ಲೂಕ 3:3ರಲ್ಲಿರುವ ಒಂದು ತದ್ರೂಪವಾದ ಪದಗುಚ್ಛದಲ್ಲಿ ಸಹ ಕಾಣಿಸಿಕೊಳ್ಳುತ್ತದೆ, “ಪಾಪಪರಿಹಾರಕ್ಕಾಗಿ [*eis*]” ಲೂಕ 24:47; ಅಪೊಸ್ತಲರ ಕೃತ್ಯಗಳು 2:38 ಸಹ ನೋಡಿರಿ). ಪಶ್ಚಾತ್ತಾಪ ಮತ್ತು ದೀಕ್ಷಾಸ್ನಾನಗಳು ಪಾಪಗಳ ಕ್ಷಮಾಪಣೆ“ಗಾಗಿ” (*eis*) ಆಗಿವೆ. ಈ ಪ್ರತಿಕ್ರಿಯೆಗಳು ಪಾಪಕ್ಷಮಾಪಣೆಯನ್ನು ಎದುರು ನೋಡುತ್ತವೆ ಮತ್ತು ಅದನ್ನ ಪಡೆದುಕೊಳ್ಳುವದಕ್ಕಾಗಿ ಇರುತ್ತವೆ; ಅವು ಈಗಾಗಲೇ ಪಡೆದುಕೊಂಡಿರುವ ಕ್ಷಮಾಪಣೆಯನ್ನು ಹಿಮ್ಮುಖವಾಗಿ ನೋಡುವದಿಲ್ಲ. ಪಶ್ಚಾತ್ತಾಪ ಪಟ್ಟು ದೀಕ್ಷಾಸ್ನಾನ ಮಾಡಿಸಿಕೊಳ್ಳುವವರಿಗೆ ಕ್ಷಮಾಪಣೆಯನ್ನು ಒದಗಿಸುವದಕ್ಕೆ ಯೇಸುವಿನ ರಕ್ತವು ಮೂಲವಾಗಿರುತ್ತದೆ.

ಪೌಲನು ಕೊಲೊಸ್ಸೆಯವರಿಗೆ ಪತ್ರಿಕೆಯಲ್ಲಿ *eis*ನ್ನು ಅನೇಕ ವಚನಗಳಲ್ಲಿ ಬಳಸಿದನು: 1:4, 6, 10, 11, 12, 13, 16, 20, 25, 29; 2:2, 5, 22; 3:9, 10, 15; 4:8, 11. ಈ ವಾಕ್ಯಭಾಗಗಳೆಲ್ಲಾ ಮುಂದಕ್ಕೆ ನೋಡುವವುಗಳಾಗಿದ್ದಾವೆ; ಅವುಗಳಲ್ಲಿ ಯಾವದೊಂದು ಸಹ ಈಗಾಗಲೆ ಸಾಧಿಸಲ್ಪಟ್ಟಿರುವ ಕ್ರಿಯೆಯನ್ನು ಹಿಂದಕ್ಕೆ ತಿರುಗಿ ನೋಡುವದಿಲ್ಲ. ಕೆಲವರು

ಮತ್ತಾಯ 12:41ನ್ನು ಒಂದು ಹೊರತಾದದ್ದೆಂದು ಮುಂದಿಡುತ್ತಾರೆ: “ಅವರು ಯೋನನು ಸಾರಿದ ವಾಕ್ಯವನ್ನು ಕೇಳಿ [*eis*] ದೇವರಕಡೆಗೆ ತಿರುಗಿಕೊಂಡರು.” ಇದು ಹೊರತಾದದ್ದಾಗಿದ್ದರೂ, ಇದು ಅಪೊಸ್ತಲರ ಕೃತ್ಯಗಳು 2:38ನ್ನು ಹೊರತುಪಡಿಸುವದಿಲ್ಲ. ನಿನೆವೆಯ ಜನರು ಯೋನನ ಬೋಧನೆಯನ್ನು ಸ್ವೀಕಾರ “ಮಾಡಿಕೊಳ್ಳುವದಕ್ಕೋಸ್ಕರ” ಎಂಬುದರ ಬದಲಾಗಿ ಯೋನನ ಬೋಧನೆಯ “ಕಾರಣದಿಂದ” ಪಶ್ಚಾತ್ತಾಪ ಪಟ್ಟರು ಎಂದು ವಾದವನ್ನು ಮಾಡಲಾಗುತ್ತದೆ. *Eis* ಮುಂದಕ್ಕೆ ನೋಡುವದಾದ್ದರಿಂದ, ಈ ವಾಕ್ಯಭಾಗದ ಅರ್ಥವು ಅವರ ಜೀವಿತಗಳು ಯೋನನು ಸಾರಿದ ಆತ್ಮೀಕ ಸುಧಾರಣೆಯೊಳಗೆ ಪ್ರವೇಶಿಸಿದವು ಎಂದಾಗುವದು.

## “ಬಂದ ಪ್ರಕಾರ ಲೋಕದಲ್ಲೆಲ್ಲಾ”

ಸುವಾರ್ತೆಯು ಕೇವಲ ಕೊಲೊಸ್ಸೆಯವರಿಗಾಗಿ ಮಾತ್ರವೇ ಆಗಿರಲಿಲ್ಲ, ಆದರೆ **ಲೋಕದಲ್ಲೆಲ್ಲಾ** (κόσμος, *kosmos*) ಆಗಿತ್ತು. ಅದು ಎಲ್ಲೆಡೆಯೂ ಇರುವಂಥ ಎಲ್ಲಾ ಜನರಿಗಾಗಿ ಒಂದೇ ಸಂದೇಶವಾಗಿದೆ. ಸುವಾರ್ತೆಯ ಮೂಲಕ ಲೋಕವನ್ನು ರಕ್ಷಿಸುವದು ದೇವರ ರಕ್ಷಣಾ ಯೋಜನೆಯಾಗಿದೆ (ಮಾರ್ಕ 16:15, 16; ರೊಮಾ 1:16; 1 ಕೊರಿಂಥ 1:21; 1 ಪೇತ್ರ 1:10-12). ಆತನು ಬೇರೆ ಯಾವ ಯೋಜನೆಯನ್ನು ಹೊಂದಿಲ್ಲ. ಲೋಕದ ಬಳಿಗೆ ಯಾರಾದರೂ ಸುವಾರ್ತೆಯನ್ನು ಕೊಂಡೊಯ್ಯುವ ಹೊರತು ಲೋಕವು ಸುವಾರ್ತೆಯನ್ನು ಕೇಳಲಾಗದು ಮತ್ತು ತಿಳಿದುಕೊಳ್ಳುವದಕ್ಕಾಗದು (ರೋಮಾ 10:14-17).

ಪೌಲನು “ಲೋಕದಲ್ಲೆಲ್ಲಾ” ಎಂಬ ಪದಗುಚ್ಛದಲ್ಲಿ “ಎಲ್ಲಾ” ಎಂಬದನ್ನು ಬಳಸಿದ್ದು ಭೂಮಿಯ ಮೇಲಿನ ಪ್ರತಿಯೊಂದು ಸ್ಥಳ ಎಂಬರ್ಥವಾಗಿರಬೇಕಾದ ಅವಶ್ಯವಿಲ್ಲ. ಪೌಲನು ರೋಮನ್ ಜಗತ್ತಿನ ಪ್ರತಿಯೊಂದು ಭಾಗವನ್ನು ಸೂಚಿಸುವದಕ್ಕಾಗಿ “ಎಲ್ಲಾ” ಎಂಬ ಪದವನ್ನು ಬಳಸಿದನು (ನೋಡಿರಿ ರೋಮಾ 1:8). ಲೂಕನು “ಎಲ್ಲಾ” ಎಂಬದನ್ನು ಲೂಕ 2:1ರಲ್ಲಿ ಅದೇ ವಿಧದಲ್ಲಿ ಬಳಸಿದನು: “ಆ ಕಾಲದಲ್ಲಿ ರಾಜ್ಯವೆಲ್ಲಾ [ಲೋಕದಲ್ಲೆಲ್ಲಾ] ಖಾನೆಷುಮಾರಿ ಬರಸಿಕೊಳ್ಳಬೇಕೆಂಬ ಆಜ್ಞೆಯು ಚಕ್ರವರ್ತಿಯಾದ ಔಗುಸ್ತನಿಂದ ಹೊರಟಿತು.” (NASB ಯ ಕೆಲವು ಮುದ್ರಣಗಳು “ಭೂಮಿಯಲ್ಲಿ ನೆಲೆಸಿದ್ದವರು” ಅಂದರೆ “ರೋಮನ್ ಸಾಮ್ರಾಜ್ಯದಲ್ಲೆಲ್ಲಾ” ಎಂದು ಅರ್ಥವಾಗಿರುತ್ತದೆಂದು ಸರಿಯಾಗಿ ಅಡಿಟಿಪ್ಪಣಿಯನ್ನು ಸೇರ್ಪಡಿಸಿರುತ್ತವೆ.)

ಸುವಾರ್ತೆಯು ಪೌಲನಿಂದ ಮಾತ್ರವಲ್ಲದೆ, ಅನೇಕ ಬೋಧಕರಿಂದ ಲೋಕದೊಳಗೆ ಕೊಂಡೊಯ್ಯಲ್ಪಟ್ಟಿತ್ತು. ಅಪೊಸ್ತಲರ ಕೃತ್ಯಗಳ ಪುಸ್ತಕವನ್ನು ಓದುವವನು ಇಸ್ರಾಯೇಲ್ ಜನಾಂಗದ ಹೊರಗಡೆಯಲ್ಲಿ ಸುವಾರ್ತಾಸೇವೆಯನ್ನು ಮಾಡುವದರಲ್ಲಿ ಪೌಲನೊಬ್ಬನೇ ತೊಡಗಿಸಿಕೊಂಡಿದ್ದನೆಂಬ ಅಭಿಪ್ರಾಯಕ್ಕೆ ಬರಬಹುದಾಗಿದೆ. ಲೂಕನು ಪುಸ್ತಕದ ಕಡೇ ಭಾಗವನ್ನು ಪೌಲನ ಸುವಾರ್ತಾಸೇವೆಯ ಕುರಿತು ಬರೆಯುವದಕ್ಕೆ ಮಾತ್ರ ಸಿಮೀತಗೊಳಿಸಿದನು, ಆದರೆ ಇದು ಅನ್ಯಜನಾಂಗದ ಜಗತ್ತಿನಲ್ಲಿ ಪೌಲನೊಬ್ಬನೇ ಸುವಾರ್ತೆಯನ್ನು ಸಾರಿದನೆಂಬ ಸೂಚ್ಯಾರ್ಥವನ್ನು ಕೊಡುವದಿಲ್ಲ. ಇತರ ಬೋಧಕರು ಸುವಾರ್ತೆಯನ್ನು ಲೋಕದ ವಿವಿಧ ಭಾಗಗಳಿಗೆ ಕೊಂಡೊಯ್ಯುವವರಾಗಿದ್ದರು (ಅಪೊಸ್ತಲರ ಕೃತ್ಯಗಳು 11:19). ಸುವಾರ್ತೆಯು ಲೋಕದಲ್ಲೆಲ್ಲಾ ಸಾರಲ್ಪಟ್ಟಿದೆ ಎಂಬ ಪೌಲನ ಹೇಳಿಕೆಯು ತೋರಿಸಿ ಕೊಡುವದೇನೆಂದರೆ ಪೌಲನ ಹೊರತಾಗಿ ಇನ್ನು ಅನೇಕರು ರೋಮನ್

ಸಾಮ್ರಾಜ್ಯದಲ್ಲಿ ಸುವಾರ್ತೆಯನ್ನು ಸಾರುವದರಲ್ಲಿ ನಿರತರಾಗಿದ್ದರು ಎಂಬದೆ.

## "ಆ ಸುವಾರ್ತೆಯು ನಿಮ್ಮಲ್ಲಿ ಫಲ ಕೊಟ್ಟು ವೃದ್ಧಿಯಾಗುತ್ತಾ ಬಂದ ಪ್ರಕಾರ . . . ಹಬ್ಬಿ ವೃದ್ಧಿಯಾಗುತ್ತಾ ಬರುತ್ತದೆ"

ಸುವಾರ್ತೆಯನ್ನು ಸಾರುವದರ ಮತ್ತು ಅದರಂತೆ ಜೀವಿಸುವದರ ಫಲಿತವು **ಫಲಿಕೊಟ್ಟು ವೃದ್ಧಿಯಾಗುತ್ತಾ ಬರುವದು** ಆಗಿತ್ತು. ಇಲ್ಲಿ ಬಳಸಲಾಗಿರುವ ಗ್ರೀಕ್ ಶಾಬ್ದಿಕ ರೂಪವು καρποφορούμενον (*karpophoroumenon*, "ಫಲಕೊಡುವಿಕೆ" ಎಂಬರ್ಥದ), "ಅಂತರ್ಗತ ಶಕ್ತಿ" ಎಂಬದನ್ನು ಸೂಚಿಸುತ್ತದೆ.[11] ಈ ವರ್ಣನಾತ್ಮಕ ಪದವು ಸುವಾರ್ತೆಯಿಂದ ಫಲಿತಗೊಂಡು ಉಂಟಾಗುವ ಉತ್ಪಾದನಾ ಶಕ್ತಿಯನ್ನು ಸೂಚಿಸುತ್ತದೆ. ಪೌಲನು ಸುವಾರ್ತೆಯನ್ನು "ದೇವರ ಬಲಸ್ವರೂಪವಾಗಿದ್ದು ರಕ್ಷಣೆ ಉಂಟು ಮಾಡುವಂತದಾಗಿದೆ" ಎಂದು ಹೇಳಿದನು.

ಬಿತ್ತುವವನ ಸಾಮ್ಯವನ್ನು ಯೇಸುವು ವಿವರಿಸಿದ ಪ್ರಕಾರವಾಗಿ, ವಾಕ್ಯವೇ ಉತ್ಪಾದನೆಗೆ ಮೂಲವಾಗಿರುತ್ತದೆ. ಈ ಸಾಮ್ಯದಲ್ಲಿ ಯೇಸು ಹೊಲದಲ್ಲಿ ಬೀಜವು ಬಿತ್ತಲ್ಪಡುವ ಬಗ್ಗೆ ಹೇಳಿದನು. ಯೇಸು "ಬೀಜವಂದರೆ ದೇವರ ವಾಕ್ಯ" (ಲೂಕ 8:11), "ಪರಲೋಕರಾಜ್ಯದ ವಾಕ್ಯ" (ಮತ್ತಾಐ 13:19) ಎಂದು ವಿವರಿಸಿದನು. ಫಲವನ್ನು ಕೊಡಬೇಕೆಂದರೆ, ಬೀಜವು ಬಿತ್ತಲ್ಪಡಬೇಕು. ಯೇಸು ಹೀಗೆ ಹೇಳಿದನು, "ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ" (ಯೋಹಾನ 6:63). ಬೀಜವಾದ, ಸತ್ಯದ ವಾಕ್ಯದ ಮೂಲಕ, ಆತ್ಮಗಳು ಶುದ್ಧ ಮಾಡಲ್ಪಡುತ್ತವೆ ಮತ್ತು ಹೊಸದಾಗಿ ಹುಟ್ಟುತ್ತವೆ (1 ಪೇತ್ರ 1:22, 23), ಒಂದು ಹೊಸ ಜೀವನವು ಉಂಟು ಮಾಡಲ್ಪಡುತ್ತದೆ.

ಶಾರೀರಕ ಬೀಜವು ಉತ್ಪಾದನೆಯಲ್ಲಿ ಮೀತಿಗಳನ್ನು ಹೊಂದಿರುತ್ತದೆ, ಅದೇ ರೀತಿ ಆತ್ಮೀಕ ಬೀಜವೂ ಆಗಿದೆ. ಆತ್ಮೀಕ ಬೀಜವು ನಿರಂತರ ಫಲ ಕೊಡುವಂಥದ್ದಾಗಿರಬೇಕೆಂದರೆ, ಕೆಲವೊಂದು ಶರತ್ತುಗಳು ಅಗತ್ಯವಿರುತ್ತವೆ: (1) ಬೀಜವು ತನ್ನಲ್ಲಿ ಜೀವವನ್ನು ಹೊಂದಿರಬೇಕು. (2) ಯಾವದೋ ಅಥವಾ ಯಾರಾದರೂ ಬೀಜವನ್ನು ನೆಡಬೇಕು. (3) ಅದು ಒಳ್ಳೇ ನೆಲದಲ್ಲಿ ಪ್ರವೇಶಿಸಬೇಕು. (4) ಅದು ಕೃಷಿ ಮಾಡಲ್ಪಡತಕ್ಕದ್ದು. (5) ಬೀಜದಿಂದ ಬೆಳೆಯುವಂಥ ಗಿಡವು ಇನ್ನಷ್ಟು ಬೀಜಗಳನ್ನು ಉತ್ಪಾದಿಸಬೇಕು. ಈ ವಿಧದಲ್ಲಿಯೇ ಯೇಸುವಿನ ರಾಜ್ಯವು ಲೋಕದಲ್ಲೆಲ್ಲಾ ಹಬ್ಬಿಕೊಳ್ಳಬಲ್ಲದ್ದಾಗಿದೆ. ವಾಕ್ಯಕ್ಕೆ ವಿಧೇಯರಾಗುವವರು ಇತರರೊಂದಿಗೆ ವಾಕ್ಯವನ್ನು ಹಂಚಿಕೊಳ್ಳುವ ಮೂಲಕ ಫಲವನ್ನು ಕೊಡುವರು. ತಂದೆ, ಯೇಸು, ಮತ್ತು ಪವಿತ್ರಾತ್ಮರು ವಾಕ್ಯವನ್ನು ಒದಗಿಸಿದ್ದಾರೆ, ಆದರೆ ಅವರು ಅದನ್ನು ಬಿತ್ತುವದಿಲ್ಲ. ನೆಡುವ ಮತ್ತು ನೀರು ಹೊಯ್ಯುವ (1 ಕೊರಿಂಥ 3:6), ಬಿತ್ತುವ ಮತ್ತು ಫಲವನ್ನು ಕೊಯ್ಯುವ ಜವಾಬ್ದಾರಿಯು ಯೇಸುವಿನ ಹಿಂಬಾಲಕರಿಗೆ ಕೊಡಲ್ಪಟ್ಟಿದೆ (ಯೋಹಾನ 4:35–38). ಪೌಲನು ಈ ಶ್ಲಾಘ್ಯ ಮತ್ತು ಜವಾಬ್ದಾರಿಯನ್ನು ಸೂಚಿಸುವವನಾಗಿ ಹೀಗೆ ಬರೆದನು, "ಈ ನಿಕ್ಷೇಪವು ಮಣ್ಣಿನ ಘಟಕಗಳಲ್ಲಿ ನಮಗುಂಟು" (2 ಕೊರಿಂಥ 4:7).

ಪ್ರಥಮ ಶತಮಾನದ ಕ್ರೈಸ್ತರು ತಾವು ಹೋದಲೆಲ್ಲಾ ವಾಕ್ಯವನ್ನು ಕೊಂಡೊಯ್ಯುದ್ದರು. ಇದರ ಕಾರಣದಿಂದ, ಅನುದಿನವೂ ಜನರು ಪರಿವರ್ತನೆಗೊಳ್ಳುತ್ತಿದ್ದರು, ಇದರಿಂದ

ಸಭೆಯು ವೃದ್ಧಿಯಾಗುತ್ತಾ ಬಹಳ ವೇಗವಾಗಿಬೆಳೆಯುತ್ತಿತ್ತು. ಜನರು ಸಾರಲ್ಪಟ್ಟ "ಸುವಾರ್ತೆಯೆಂಬ ಸತ್ಯ ವಾಕ್ಯವನ್ನು" ಸ್ವೀಕರಿಸಿದಾಗ ಸಂಖ್ಯೆಯಲ್ಲಿ ಬೆಳವಣಿಗೆಯಾಯಿತು (ಎಫೆಸ 1:13).[12] ಸಭೆಗಳು ವಿವಿಧ ವಿಧಾನಗಳನ್ನು ಅನುಸಿರಿಸಿ ಬೆಳೆಯುವದಕ್ಕೆ ಪ್ರಯತ್ನಿಸಬಹುದು, ಆದರೆ ಬೆಳವಣಿಗೆಯು ಸಂಭವಿಸಬೇಕಾದರೆ ದೇವರ ಯೋಜನೆಯು ವಾಕ್ಯವನ್ನು ಸಾರುವದರ ಮೂಲಕವಾಗಿಯೇ ಆಗಿದೆ (ಅಪೊಸ್ತಲರ ಕೃತ್ಯಗಳು 8:4, 25; 18:11, 2 ತಿಮೊಥೆ 4:2). ಆದಿ ಸಭೆಯು "ನಿರಂತರವಾಗಿ ಫಲ ಕೊಡುತ್ತಿತ್ತು ಮತ್ತು ಅಭಿವೃದ್ಧಿಗೊಳ್ಳುತ್ತಿತ್ತು" ಯಾಕೆಂದರೆ ಅದು ದೇವರ ವಾಕ್ಯವನ್ನು ಇತರರೊಂದಿಗೆ ನಿರಂತರವಾಗಿ ಹಂಚಿಕೊಳ್ಳುತ್ತಿತ್ತು. Carson ಹೀಗೆ ಬರೆಯುತ್ತಾನೆ,

> ಆದರೆ ಸುವಾರ್ತೆಯು ಆಳವಾಗಿ ಒಳಗೆ ಕಾರ್ಯ ಮಾಡುವದು ಮಾತ್ರವಲ್ಲ ಆದರೆ ಅದು ನಿರಂತರವಾಗಿ ಪ್ರಭಾವದಲ್ಲಿ ವೃದ್ಧಿಯಾಗುತ್ತಲಿರುತ್ತದೆ. ದೇವರ ಒದಗಿಸುವಿಕೆಯಲ್ಲಿ ಇವೆರಡು ಸಂಬಂಧ ಹೊಂದಿವೆ. ಅದು ವಾಡಿಕೆಯ ಪ್ರಕಾರ ವ್ಯಕ್ತಿಯಲ್ಲಿನ ತನ್ನ ಫಲದಾಯಕತೆಯ ಮೂಲಕ ಆ ವ್ಯಕ್ತಿಯ ಮುಖಾಂತರ ಇತರರನ್ನು ಸಂಧಿಸುತ್ತದೆ; ಮತ್ತು ಹೀಗೆ ಇತರರ ಮೇಲೆ ಸುವಾರ್ತೆಯ ಪ್ರಭಾವದಲ್ಲಿನ ಬೆಳವಣಿಗೆಯೊಂದಿಗೆ ಪರಿಶುದ್ಧತೆಯ ಆಳವು ಹೋಲಿಸಲ್ಪಡುತ್ತದೆ.[13]

ಉಲ್ಲೇಖಿಸಲ್ಪಟ್ಟ "ಫಲ" ಎಂಬುದು ಎರಡು ವಿಧವಾದ ಫಲಗಳನ್ನೊಳಗೊಂಡಿರಬಹುದು, ಸಂಖ್ಯಾತ್ಮಕ ಮತ್ತು ಆತ್ಮೀಕ. ಸಂಖ್ಯಾತ್ಮಕ ಫಲವು ಕ್ರಿಸ್ತನ ಬಳಿಗೆ ಕರೆ ತರಲ್ಪಟ್ಟ ಜನರನ್ನು ಸೂಚಿಸುತ್ತದೆ (ಯೋಹಾನ 4:34-36; 12:24; 15:8, 16; ರೋಮಾ 1:13; ಫಿಲಿಪ್ಪಿ 1:22). ಆತ್ಮೀಕ ಫಲ (ಅಥವಾ "ಪವಿತ್ರಾತ್ಮನಿಂದಾಗುವ ಫಲಗಳು"; ಗಲಾತ್ಯ 5:22-23) ಯೇಸುವಿನಿಂದ ಮಾದರಿ ತೋರಿಸಲ್ಪಟ್ಟ ಪ್ರಕಾರ, ಭಕ್ತಿಯ ಗುಣಗಳನ್ನು ಬೆಳೆಸಿಕೊಳ್ಳುವದನ್ನು ಸೂಚಿಸುತ್ತದೆ. ಎರಡು ಒಂದಕ್ಕೊಂದು ಸಂಬಂಧ ಹೊಂದಿವೆ. ಕ್ರಿಸ್ತನ ಬಳಿಗೆ ತರಲ್ಪಟ್ಟವರು ಆತನಲ್ಲಿ ಸಿಕ್ಕುವ ಗುಣಗಳನ್ನು ತಮ್ಮೊಳಗೆ ಬೆಳೆಸಿಕೊಳ್ಳುವದಕ್ಕೆ ನಿರಂತರ ಪ್ರಯತ್ನವನ್ನು ಮಾಡಬೇಕು. ಅದರ ಫಲಿತವು ಕ್ರಿಸ್ತನ ಸಾರೂಪ್ಯ ಮತ್ತು ನಮ್ಮ ಸುತ್ತಲಿನರವನ್ನು ಸಂಧಿಸುವದು ಆಗಿರುತ್ತದೆ.

ಫಲ ಕೊಡುವಂಥದ್ದೆಲ್ಲವೂ ತನ್ನ ಜಾತಿಯ ಫಲವನ್ನು ಉತ್ಪಾದಿಸುತ್ತದೆ (ಆದಿಕಾಂಡ 1:11, 12). ಈ ಮೂಲತತ್ವವು ಶಾರೀರಿಕ ಮಂಡಲದಲ್ಲಿಯೂ ಆತ್ಮೀಕ ಮಂಡಲದಲ್ಲಿಯೂ ಅಷ್ಟೇ ಸತ್ಯವಾಗಿದೆ. ದೇವರ ವಾಕ್ಯದ ಫಲವು ದೇವರ ರಾಜ್ಯವಾದ ಸಭೆಯೇ ಆಗಿದೆ (ಮತ್ತಾಯ 13:19; ಲೂಕ 8:11). ಆತನ ವಾಕ್ಯವನ್ನು ಬಿತ್ತುವ ಮೂಲಕ, ಉಂಟಾಗುವ ಉತ್ಪನ್ನವೆಂದರೆ ಕ್ರಿಸ್ತನ ಸಭೆಯ ಸದಸ್ಯರಾದ ಕ್ರೈಸ್ತರೇ. ಸತ್ಯದ ಫಲವು ತನಗೆ ತದ್ವಿರುದ್ಧವಾದ ಯಾವ ಫಲವನ್ನೂ ಕೊಡಲಾರದು. ದೇವರ ವಾಕ್ಯವು ಕ್ರೈಸ್ತತ್ವದ ಅನೇಕ ವಿಧವಾದ ಛಾಯೆಗಳನ್ನುಂಟು ಮಾಡುವದಿಲ್ಲ. ಸುವಾರ್ತೆಯ ಫಲವು ಸುವಾರ್ತೆಯ ಬೇಡಿಕೆಗಳೊಂದಿಗೆ ಅನುರೂಪತೆ ಹೊಂದಿರುವದೇ ಆಗಿದ್ದು, ಬೋಧನೆಯ ಮತ್ತು ಜೀವನದಲ್ಲಿನ ಶುದ್ಧತೆಯಲ್ಲಿ ವ್ಯಕ್ತಪಡಿಸಲ್ಪಡುವದಾಗಿದೆ. ಶುದ್ಧ ಸಿದ್ಧಾಂತದ ಪ್ರಕಾರವಾಗಿ ಜೀವಿಸುವದರಿಂದ ಹಿಂಬಾಲಕರೊಳಗೆ ಐಕ್ಯತೆಯುಂಟಾಗುವದರಲ್ಲಿ ಫಲಿತಗೊಳ್ಳುತ್ತದೆ (1 ಕೊರಿಂಥ 12:13; ಎಫೆಸ 4:4-6).

ದ್ರಾಕ್ಷಾ ಬಳ್ಳಿ ಮತ್ತು ಅದರ ಕೊಂಬೆಗಳ ಸಾಮ್ಯದಲ್ಲಿ, ತನ್ನೊಳಗೆ ನೆಲೆಗೊಳ್ಳುವ

ಪ್ರತಿಯೊಂದು ಕೊಂಬೆಯು ಫಲವನ್ನು ಕೊಡುವದು ಎಂಬದಾಗಿ ಯೇಸು ಹೇಳಿದನು. ಒಂದು ಕೊಂಬೆಯು ಫಲವನ್ನು ಕೊಡದಿದ್ದಲ್ಲಿ, ಅದನ್ನ ಕಡಿದು ಬೆಂಕಿಯಲ್ಲಿ ಹಾಕುವರು (ಯೋಹಾನ 15:1-6). ಹೆಚ್ಚು ಫಲ ಕೊಡುವಂಥ ಕೊಂಬೆಗಳು ದೇವರನ್ನು ಮಹಿಮೆ ಪಡಿಸುವವು (ಯೋಹಾನ 15:8).

ಇತರ ಸಭೆಗಳು ಫಲವನ್ನು ಕೊಡುತ್ತಾ ಅಭಿವೃದ್ಧಿಗೊಳ್ಳುತ್ತಿದ್ದದ್ದು ಮಾತ್ರವಾಗಿರಲಿಲ್ಲ, ಆದರೆ ಕೊಲೊಸ್ಸೆಯಲ್ಲಿರುವ ಕ್ರಿಸ್ತನ ಶಿಷ್ಯರು ಅದನ್ನೇ ಮಾಡುತ್ತಿದ್ದರು, **ನಿಮ್ಮಲ್ಲಿ ಅಭಿವೃದ್ಧಿಯಾಗುತ್ತಾ ಬಂದ ಪ್ರಕಾರ** ಎಂಬ ಮಾತುಗಳಲ್ಲಿ ಅದು ವ್ಯಕ್ತವಾಗಿರುತ್ತದೆ. ಅವರು ಸುವಾರ್ತೆಯ ಸತ್ಯವನ್ನು ಹಂಚಿಕೊಳ್ಳುತ್ತಿದ್ದರು ಮತ್ತು ಅದೇ ಫಲಿತಗಳನ್ನು ಕಾಣುತ್ತಿದ್ದರು. ಸಭೆಯ ಸದಸ್ಯರು ನಾಶನದಲ್ಲಿರುವವರಿಗೆ ಯೇಸುವಿನ ವಾಕ್ಯವನ್ನು ಸಾರುತ್ತಿರುವದಾದರೆ ಸಭೆಗಳು ಬೆಳೆಯಬಲ್ಲವು. ಬೀಜವು ಬಿತ್ತಲ್ಪಟ್ಟ ಕಡೆಯಲ್ಲಿ ಮಾತ್ರವೇ ಸುಗ್ಗಿಯನ್ನು ನಿರೀಕ್ಷಿಸಬಹುದಾಗಿದೆ. ಒಂದು ಬರಿದಾದ ಹೊಲದಲ್ಲಿ ಬೀಜವು ಬಿತ್ತಲ್ಪಟ್ಟಿಲ್ಲವೆಂದರೆ, ಕಳೆಗಳು ಬೆಳೆಯಬಹುದು, ಆದರೆ ಅಲ್ಲಿ ಒಳ್ಳೇ ಧಾನ್ಯದ ಸುಗ್ಗಿಯು ಇರುವದಿಲ್ಲ.

### "ನೀವು ದೇವರ ಕೃಪೆಯನ್ನು ಕುರಿತು ಸತ್ಯಾರ್ಥವನ್ನು ಕೇಳಿ ತಿಳುಕೊಂಡ ದಿವಸದಿಂದ"

ಕೊಲೊಸ್ಸೆಯಲ್ಲಿ ಬೀಜವು ಬಿತ್ತಲ್ಪಟ್ಟಿತ್ತು. [ಕೊಲೊಸ್ಸೆಯವರು] **ದೇವರ ಕೃಪೆಯ ಕುರಿತು ಸತ್ಯಾರ್ಥವನ್ನು** [ಸುವಾರ್ತೆಯ] **ಕೇಳಿ ತಿಳುಕೊಂಡ ದಿವಸದಿಂದ** ಅದು ಫಲವನ್ನು ಕೊಡುತ್ತಿದೆ ಎಂದು ಪೌಲನು ಹೇಳಿದನು.

ಈ ಸಹೋದರರು ಸುವಾರ್ತೆಯನ್ನು ಅರ್ಥಮಾಡಿಕೊಳ್ಳುವ ತನಕ ಸಾರುವದಕ್ಕೆ ಆರಂಭಿಸಲಿಲ್ಲ. ಅವರು ತಮ್ಮ ಕ್ರೈಸ್ತ ಜೀವಿತಗಳ ಬಹಳ ಆರಂಭದಲ್ಲಿಯೇ ದೇವರ ಕೃಪೆಯ ಸುವಾರ್ತೆಯನ್ನು ಗ್ರಹಿಸಿಕೊಂಡರೆಂದು ಸೂಚ್ಯಾರ್ಥವಿರುತ್ತದೆ. ಆತನ ಕೃಪೆಯ ಮೇಲೆ ಅವಲಂಭಿತವಾಗಿಯೇ ಕ್ರೈಸ್ತ ಜೀವನ ಆರಂಭಗೊಳ್ಳುತ್ತದೆ, ಮುಂದೆ ಸಾಗುತ್ತದೆ, ಮತ್ತು ನೆಲೆಗೊಳ್ಳುತ್ತದೆ. ಪಾಪಗಳ ಕ್ಷಮಾಪಣೆಗಾಗಿ "ಕೃಪೆ" ಎಂಬ ಪದವನ್ನು ಬಳಸದೆ ಶಿಲುಬೆಯನ್ನು ಸಾರುವದರ ಮೂಲಕ "ಕೃಪೆ"ಯ ಭಾವನೆಯನ್ನು ಬೋಧಿಸಬಹುದು. ಮಾನವನ ಯೋಗ್ಯತೆಯನ್ನು ಅವಲಂಭಿಸದೆಯೇ ಪಾಪಗಳನ್ನು ಕ್ಷಮಿಸುವದಕ್ಕೆ ಕ್ರಿಸ್ತನ ರಕ್ತ ಮತ್ತು ಆತನ ಪುನರುತ್ಥಾನಕ್ಕಿರುವ ಶಕ್ತಿಯನ್ನು ಅರ್ಥಮಾಡಿಕೊಳ್ಳುವಿಕೆಯ ಮೇಲೆ ರಕ್ಷಣೆಯು ಆಧಾರವಾಗಿರುತ್ತದೆ (ರೋಮಾ 3:25; 10:9, 10). ಅದೇ ಕೃಪೆಯಾಗಿದೆ.

ಸುವಾರ್ತೆಯ ಬರವಣಿಗೆಗಳಲ್ಲಿ, ಲೂಕ ಸುವಾರ್ತೆಯು ಮಾತ್ರವೇ ಯೇಸುವು "ಕೃಪೆ" (χάρις, *charis*) ಎಂಬ ಪದವನ್ನು ತನ್ನ ಉಪದೇಶಗಳಲ್ಲಿ ಬಳಸುವದಾಗಿ ಬರೆದಿದ್ದಾನೆ. ಆತನು ಇದನ್ನು ಕೃತಜ್ಞತಾಭಾವನೆಯನ್ನು ಸೂಚಿಸುವ ಅರ್ಥದಲ್ಲಿ ಬಳಸಿದನು (ಲೂಕ 6:32-34; 17:9), ಆದರೆ ಅರ್ಹವಲ್ಲದವರಿಗೆ ಸಿಕ್ಕುವ ದಯೆ ಎಂಬ ಅರ್ಥದಲ್ಲಿ ಎಂದಿಗೂ ಬಳಸಲಿಲ್ಲ. *Charis* ಎಂಬ ಪದವು ಮತ್ತಾಯ ಅಥವಾ ಮಾರ್ಕ ಸುವಾರ್ತೆಯಲ್ಲಿ ಕಾಣಿಸಿಕೊಳ್ಳುವದಿಲ್ಲ ಮತ್ತು ಯೋಹಾನ ಸುವಾರ್ತೆಯ ಪೀಠಿಕೆಯಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ (1:14, 16, 17).

ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ದಾಖಲಿಸಲ್ಪಟ್ಟಿರುವ ಪ್ರಕಾರ ಸುವಾರ್ತೆಯನ್ನು ಸಾರಿದವರು ತಮ್ಮ ಪ್ರಸಂಗಗಳಲ್ಲಿ *charis* ಪದದ ಬಳಕೆಯನ್ನು ಮಾಡಲಿಲ್ಲ, ಆದರೆ ಅವರ

ಸುವಾರ್ತಾ ಸಾರುವಿಕೆ ಕುರಿತಾದ ಸನ್ನಿವೇಶದಲ್ಲಿ ಆ ಪದವು ಹಲವಾರು ಸಾರಿ ಕಾಣಿಸಿಕೊಳ್ಳುವದಂತೂ ನಿಜ:

- ಅಂತಿಯೋಕ್ಯದಲ್ಲಿರುವ ಕ್ರೈಸ್ತರನ್ನು ಪ್ರೋತ್ಸಾಹಿಸುವದಕ್ಕೋಸ್ಕರ ಯೆರೂಸಲೇಮಿನಲ್ಲಿರುವ ಸಭೆಯವರಿಂದ ಕಳುಹಿಸಲ್ಪಟ್ಟವನಾಗಿ, ಬಾರ್ನಬನು ಅಲ್ಲಿಗೆ ಬಂದು ತಲುಪಿ "ದೇವರ ಕೃಪಾಕಾರ್ಯವನ್ನು" ನೋಡಿದಾಗ ಸಂತೋಷ ಪಟ್ಟನು (ಅಪೊಸ್ತಲರ ಕೃತ್ಯಗಳು 11:22. 23).
- ತಮ್ಮ ಪ್ರಥಮ ಸುವಾರ್ತಾ ಪ್ರಯಾಣದ ವೇಳೆ ಅಂತಿಯೋಕ್ಯದಲ್ಲಿರುವಾಗ, ಪೌಲ ಮತ್ತು ಬಾರ್ನಬರು ಕ್ರೈಸ್ತರನ್ನು "ದೇವರ ಕೃಪಾಶ್ರಯದಲ್ಲಿ" ನೆಲೆಗೊಂಡಿರಬೇಕೆಂದು ಬುದ್ಧಿವಾದ ಹೇಳಿದರು (ಅಪೊಸ್ತಲರ ಕೃತ್ಯಗಳು 13:43). ಇಕೋನ್ಯದಲ್ಲಿ ದೇವರು ಸೂಚಕಕಾರ್ಯಗಳನ್ನು ಮತ್ತು ಅದ್ಭುತಕಾರ್ಯಗಳನ್ನು ಮಾಡುವಂತೆ ಅನುಗ್ರಹಿಸುವ ಮೂಲಕ "ಕೃಪಾವಾಕ್ಯಕ್ಕೆ" ಸಾಕ್ಷಿ ಕೊಟ್ಟನು (ಅಪೊಸ್ತಲರ ಕೃತ್ಯಗಳು 14:3). ಅವರು ಅಂತಿಯೋಕ್ಯದಲ್ಲಿನ ಸಭೆಯಿಂದ "ದೇವರ ಕೃಪಾಶ್ರಯಕ್ಕೆ" ಒಪ್ಪಿಸಲ್ಪಟ್ಟಿದ್ದರು (ಅಪೊಸ್ತಲರ ಕೃತ್ಯಗಳು 14:26).
- ಯೆಹೂದ್ಯರು ರಕ್ಷಣೆ ಹೊಂದುತ್ತಿರುವ ರೀತಿಯಲ್ಲಿಯೇ, ಅನ್ಯಜನರು "ಯೇಸುವಿನ ಕೃಪೆಯಿಂದ" ರಕ್ಷಿಸಲ್ಪಡುತ್ತಿದ್ದಾರೆಂದು ಪೇತ್ರನು ಹೇಳಿದನು (ಅಪೊಸ್ತಲರ ಕೃತ್ಯಗಳು 15:11).
- ಪೌಲ ಮತ್ತು ಸೀಲರು ಎರಡನೆಯ ಸುವಾರ್ತಾ ಪ್ರಯಾಣಕ್ಕಾಗಿ ಕಳುಹಿಸಲ್ಪಟ್ಟಾಗ, ಸಹೋದರರು ಅವರನ್ನು "ದೇವರ ಕೃಪಾಶ್ರಯಕ್ಕೆ" ಒಪ್ಪಿಸಿದರು (ಅಪೊಸ್ತಲರ ಕೃತ್ಯಗಳು 15:40).
- ಅಪೊಲ್ಲೋಸನು ದೇವರ "ಕೃಪೆಯಿಂದ" ನಂಬಿದ್ದವರಿಗೆ ಬಹಳ ಸಹಾಯ ಮಾಡಿದನು (ಅಪೊಸ್ತಲರ ಕೃತ್ಯಗಳು 18:27).
- ಪೌಲನು ಎಫೆಸದಲ್ಲಿರುವ ಹಿರಿಯರಿಗೆ ತಾನು "ದೇವರ ಕೃಪೆಯ ವಿಷಯವಾದ" ಸೇವೆಯನ್ನು ಕೊನೆಗಾಣಿಸುವೆನೆಂಬ ತನ್ನ ಇಚ್ಛೆಯನ್ನು ತಿಳಿಸುತ್ತಾನೆ (ಅಪೊಸ್ತಲರ ಕೃತ್ಯಗಳು 20:24) ಮತ್ತು ಅವರನ್ನು "ಕೃಪಾವಾಕ್ಯಕ್ಕೆ" ಒಪ್ಪಿಸಿ ಕೊಟ್ಟನು (ಅಪೊಸ್ತಲರ ಕೃತ್ಯಗಳು 20:32).

ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ದಾಖಲಿಸಲ್ಪಟ್ಟಿರುವ ಯಾವ ಸಂದೇಶದಲ್ಲಿಯೂ "ಕೃಪೆ" ಎಂಬ ಸೇರ್ಪಡೆಗೊಳ್ಳದೆ ಇದ್ದಾಗ್ಯೂ, ಅವುಗಳಲ್ಲಿನ ಸಂದೇಶದಲ್ಲಿ ಯಾವಾಗಲೂ ಯೇಸುವಿನ ಮೂಲಕ ಮತ್ತು ಆತನ ಹೆಸರಿನಲ್ಲಿ ಸಿಕ್ಕುವ ಕ್ಷಮಾಪಣೆ, ರಕ್ಷಣೆ, ಮತ್ತು ನೀತಿವಂತರೆಂಬ ನಿರ್ಣಯ ಸೇರಿರುತ್ತಿದ್ದವು (ಅಪೊಸ್ತಲರ ಕೃತ್ಯಗಳು 3:19; 4:12; 10:43; 13:26, 39; 16:31, 32; 22:16). ಹೀಗೆ "ಕೃಪೆ" ಎಂಬುದು ಹೆಸರಿಸಲ್ಪಡದಿದ್ದಾಗ್ಯೂ, ಯೇಸುವಿನ ಮೂಲಕ ದೇವರ ಕ್ಷಮಾಪಣೆಯ ಕುರಿತಾಗಿ ಬೋಧಿಸುವಾಗಲೆಲ್ಲಾ ಅದು ಸಾರಲ್ಪಡುತ್ತಿತ್ತು.

ಕೊಲೊಸ್ಸೆಯವರು ಕೃಪೆಯನ್ನು "ತಿಳುಕೊಂಡರು" ಎಂದು ಪೌಲನು ಹೇಳಿದನು. "ತಿಳುಕೊಂಡರು" (ἐπιγινώσκω, *epiginōskō*) ಎಂಬುದು *epi*, "ಮೇಲೆ," ಮತ್ತು *gnosis*, "ತಿಳುಕೊಳ್ಳು" ಎಂಬ ಪದಗಳ ಸಂಯೋಜನೆಯಾಗಿದೆ. ಇದು ಒಂದನ್ನು ಬುದ್ಧಿಶಕ್ತಿಯಿಂದ ತಿಳಿಯುವದು ಅಥವಾ ಅರ್ಥಮಾಡಿಕೊಳ್ಳುವದು ಎಂಬುದಕ್ಕಿಂತಲೂ ಅಧಿಕವಾದದ್ದನ್ನು ವ್ಯಕ್ತಪಡಿಸುತ್ತದೆ. ಇದರರ್ಥವು ಬೋಧನೆ ಮತ್ತು ಅನುಭವದ ಕಾರಣದಿಂದ ಸಂಪೂರ್ಣವಾಗಿ ತಿಳುಕೊಂಡಿರುವದು ಎಂದಾಗಿರುತ್ತದೆ. ಪೌಲನು ಇಲ್ಲಿ ಒಂದು ಮೂಲಭೂತ ಭಾವನೆಯ ಸಂಪೂರ್ಣ ಗ್ರಹಿಸಿಕೊಳ್ಳುವಿಕೆಯನ್ನು ತಲುಪಿರುವ ಜ್ಞಾನದ ಬಗ್ಗೆ ಮಾತಾಡುತ್ತಿದ್ದಾನೆ. ಹೊಸ ಒಡಂಬಡಿಕೆಯಲ್ಲಿ, ಈ ಪದದ ರೂಪಗಳು ಸಾಮಾನ್ಯವಾಗಿ ಆತ್ಮೀಕ ಜ್ಞಾನಕ್ಕೆ ಅನ್ವಯವಾಗುತ್ತವೆ (ರೋಮಾ 1:28; ಎಫೆಸ 1:17; 4:13; ಕೊಲೊಸ್ಸೆ 3:10; 1 ತಿಮೊಥೆ 2:4). ಕೊಲೊಸ್ಸೆಯವರು, ಕ್ರಿಸ್ತನ ಸಂದೇಶವನ್ನು ಕೇಳುವ ಮತ್ತು ಅದರಂತೆ ಜೀವಿಸುವ ಮೂಲಕ, ಸುವಾರ್ತೆಯ ಮೇಲ್ಗಡೆ ಜ್ಞಾನವನ್ನು ಮಾತ್ರವೇ ಗ್ರಹಿಸಿಕೊಳ್ಳುವ ಬದಲಾಗಿ ಅದರ ಆಳವಾದ ಅರ್ಥವನ್ನು ಮನದಟ್ಟು ಮಾಡಿಕೊಂಡಿದ್ದರು.

ಸುವಾರ್ತೆಯು ಅರ್ಥಮಾಡಿಕೊಳ್ಳಬಲ್ಲದ್ದಾಗಿದೆ. ಕೊಲೊಸ್ಸೆಯವರು ಇದಕ್ಕೆ ಪುರಾವೆ ಆಗಿದ್ದಾರೆ. ಅವರು ಅದನ್ನು ಕೇಳಿದರು ಮತ್ತು ಅದನ್ನು ಅರ್ಥಮಾಡಿಕೊಂಡರು. ತಾನು ಬರೆದದ್ದನ್ನು ಎಫೆಸದವರು ಗ್ರಹಿಸಿಕೊಳ್ಳುವರೆಂದು ಪೌಲನು ಅಪೇಕ್ಷಿಸಿದ್ದನು. ಆತನು ಅವರಿಗೆ ಹೀಗೆ ಹೇಳುತ್ತಾನೆ, ". . . ಬರೆದದ್ದನ್ನು ನೀವು ಓದಿ ನೋಡಿದರೆ ಕ್ರಿಸ್ತನ ವಿಷಯವಾದ ಮರ್ಮವನ್ನು ಕುರಿತು ನನಗಿರುವ ಗ್ರಹಿಕೆಯನ್ನು ನೀವು ತಿಳುಕೊಳ್ಳಬಹುದು" (ಎಫೆಸ 3:4). ಆತನು ಕೊರಿಂಥದವರಿಗೆ ಹೀಗೆ ಭರವಸೆ ನೀಡುತ್ತಾನೆ, "ನೀವು ನಮ್ಮ ಪತ್ರಿಕೆಗಳಲ್ಲಿ ಓದಿ ಒಪ್ಪಿಕೊಂಡ ಸಂಗತಿಗಳನ್ನೇ ಅಲ್ಲದೆ ಬೇರೆ ಯಾವದನ್ನೂ ನಾವು ನಿಮಗೆ ಬರೆಯಲಿಲ್ಲ" (2 ಕೊರಿಂಥ 1:13).

ಅವರು "ಸತ್ಯಾರ್ಥವನ್ನು" ತಿಳುಕೊಂಡಿದ್ದರು ಎಂದು ಹೇಳುವ ಮೂಲಕ, ಪೌಲನ ತಾತ್ಪರ್ಯವು ಅವರು ದೇವರ ಕೃಪೆಯ ಸತ್ಯ ಅರ್ಥವನ್ನು ತಿಳಿಕೊಂಡು ಅನುಭವ ಮಾಡಿದ್ದಾರೆ ಎಂಬದೆ ಆಗಿತ್ತು. ಅವರು ಬುದ್ಧಿಶಕ್ತಿಯಿಂದ ಕೃಪೆಯ ಜ್ಞಾನವನ್ನು ಹೊಂದಿದ್ದರ ಜೊತೆಗೆ, ಅವರು ಈಗ ತಮ್ಮ ಜೀವಿತಗಳಲ್ಲಿ ದೇವರ ಕೃಪೆಯ ಆಶೀರ್ವಾದಗಳನ್ನು ಮನದಟ್ಟು ಮಾಡಿಕೊಂಡಿದ್ದರು. "ಸತ್ಯಾರ್ಥವನ್ನು" ಎಂಬದರಲ್ಲಿ, ಅವರು ಕೇವಲ ತೋರಿಕೆಯ ಬದಲಾಗಿ, ಕೃಪೆಯ ಅರ್ಥವನ್ನು ಅರ್ಥಮಾಡಿಕೊಂಡಿದ್ದರು.

## ಎಪಫ್ರನ ವರದಿ (1:7, 8)

**[7]ನಮ್ಮ ಪ್ರಿಯ ಜೊತೆಯ ದಾಸನಾದ ಎಪಫ್ರನಿಂದ ಆ ಸತ್ಯೋಪದೇಶವನ್ನು ಕಲಿತುಕೊಂಡಿರಿ. ಅವನು ನಿಮಗೋಸ್ಕರ ಕ್ರಿಸ್ತನ ನಂಬಿಗಸ್ತನಾದ ಸೇವಕನು. ಪವಿತ್ರಾತ್ಮ ಪ್ರೇರಿತವಾದ ನಿಮ್ಮ ಪ್ರೀತಿಯ ವಿಷಯದಲ್ಲಿ ನನಗೆ ತಿಳಿಸಿದವನು ಅವನೇ.**

### "ಎಪಫ್ರನಿಂದ ಆ ಸತ್ಯೋಪದೇಶವನ್ನು ಕಲಿತುಕೊಂಡಿರಿ" (1:7)

ಎಪಫ್ರನು ಕೊಲೊಸ್ಸೆಯವರಿಗೆ ಕಲಿಸಿ ಕೊಟ್ಟ ಸಂದೇಶಕನಾಗಿದ್ದನು. ಈ ಸಹೋದರನಿಗೆ ಸತ್ಯದ ತಿಳುವಳಿಕೆಯು ಪೌಲನಿಂದ ಕಲಿಸಲ್ಪಡುವದರ ಮೂಲಕ

ಬಂದಿರಬೇಕು ಅಥವಾ ನೇರವಾಗಿ ಪವಿತ್ರಾತ್ಮನಿಂದ ಕಲಿಸಲ್ಪಡುವ ಮೂಲಕವೇ ಬಂದಿರಬೇಕು. ಆತನಿಗೆ ಪವಿತ್ರಾತ್ಮನ ವರದಾನವು ಪೌಲನಿಂದ ಕೈಗಳನ್ನಿಡುವ ಮೂಲಕ ದೊರಕಿರಬಹುದಾಗಿದೆ.

ಇತರರೆಲ್ಲಾ ಕಲಿತುಕೊಂಡಿರಬೇಕಾದ ರೀತಿಯಲ್ಲಿಯೇ, ಕೊಲೊಸ್ಸೆಯವರು ಸುವಾರ್ತೆಯ ಸತ್ಯದ ಬಗ್ಗೆ **ಕಲಿತುಕೊಂಡರು**. ಆರಂಭದಲ್ಲಿ, ಅದು ಪ್ರತ್ಯೇಕವಾಗಿ ಸಾರುವಿಕೆ ಮತ್ತು ಬೋಧನೆಯ ಮೂಲಕ ಹರಡಿಸಲ್ಪಟ್ಟಿತು. ಅದು ಬರೆಯಲ್ಪಟ್ಟ ಬಳಿಕ, ಸತ್ಯವನ್ನು ಓದುವ ಮೂಲಕವಾಗಿ ಸಹ ಕಲಿತುಕೊಳ್ಳಬಹುದಾಗಿದೆ (ಎಫೆಸ 3:3-5).

ಕೊಲೊಸ್ಸೆಯವರಿಗೆ ಪವಿತ್ರಾತ್ಮನು ಬೋಧಿಸಲಿಲ್ಲ, ದೇವದೂತರೂ ಬೋಧಿಸಲಿಲ್ಲ (1 ಪೇತ್ರ 1:10-12). ಯೇಸು ಅಪೊಸ್ತಲರಿಗೆ ಮತ್ತು ಹೊಸ ಒಡಂಬಡಿಕೆಯ ಪ್ರವಾದಿಗಳಿಗೆ ಪವಿತ್ರಾತ್ಮನ ಮೂಲಕ ಸತ್ಯವನ್ನು ಪ್ರಕಟಗೊಳಿಸಿದನು (ಯೋಹಾನ 14:26). ಯೇಸು ಕಡೇ ರಾತ್ರಿ ಭೋಜನದ ವೇಳೆ ಅಪೊಸ್ತಲರ ಸಂಗಡ ಇದ್ದ ವೇಳೆ, ಆತನು ಅವರಿಗೆ ಪವಿತ್ರಾತ್ಮನ ಮೂಲಕ ಪ್ರಕಟಗೊಳಿಸುವ ವಾಗ್ದಾನವನ್ನು ಮಾಡಿದನು. ಆ ಸಂದರ್ಭದಲ್ಲಿನ ಆತನ ಹೇಳಿಕೆಗಳು ನಿರ್ದಿಷ್ಟವಾಗಿ ಅವರಿಗೋಸ್ಕರ ಮಾತ್ರವೇ ಆಗಿದ್ದವು: "ಈ ಮಾತುಗಳಲ್ಲು ನಾನು ಇನ್ನೂ ನಿಮ್ಮ ಬಳಿಯಲ್ಲಿರುವಾಗ ನಿಮಗೆ ಹೇಳಿದ್ದೇನೆ" (ಯೋಹಾನ 14:25); "ನೀವು ಮೊದಲಿನಿಂದ ನನ್ನ ಸಂಗಡ ಇದ್ದಕಾರಣ ನೀವೂ ಸಾಕ್ಷಿಗಳಾಗಿದ್ದೀರಿ" (ಯೋಹಾನ 15:27); "ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ ಸದ್ಯಕ್ಕೆ ಅದನ್ನು ಹೊರಲಾರಿರಿ" (ಯೋಹಾನ 16:12).

ಅಪೊಸ್ತಲರು ಮತ್ತು ಹೊಸ ಒಡಂಬಡಿಕೆಯ ಪ್ರವಾದಿಗಳು ಸತ್ಯದ ಭಂಡಾರಗಳಂತಿದ್ದು ಅವರಿಂದ ಬೋಧಕರು ಮಾಹಿತಿಯನ್ನು ಸೆಳೆದುಕೊಳ್ಳುತ್ತಿದ್ದರು. ತಾನು ಆತನಿಗೆ ಬೋಧಿಸಿದ್ದನ್ನು ಇತತರಿಗೆ ಬೋಧಿಸ ಶಕ್ತರಾದ ಬೇರೆಯವರಿಗೆ ಬೋಧಿಸುವಂತೆ ಪೌಲನು ತಿಮೊಥೆಯನಿಗೆ ಹೇಳಿದನು (2 ತಿಮೊಥೆ 2:2). ಅಪೊಸ್ತಲರು ಮತ್ತು ಪ್ರವಾದಿಗಳು ಸಭೆಯ ಅಸ್ತಿವಾರದಲ್ಲಿದ್ದರು (ಎಫೆಸ 2:20) ಮತ್ತು ಕರ್ತನ ಆಜ್ಞೆಗಳನ್ನು ಬರೆದರು (1 ಕೊರಿಂಥ 14:37).

"ಎಪಫ್ರನು" ಎಂಬ ಹೆಸರು ಲ್ಯಾಟಿನ್ ಹೆಸರಾದ "Venustus" ("ಸುಂದರನು" ಅಥವಾ "ಆಕರ್ಷಕವಾದವನು" ಎಂಬ ಅರ್ಥವುಳ್ಳದ್ದು) ಎಂಬುದಕ್ಕೆ ಸಂಬಂಧಪಡುವಂಥ "ಎಪಫ್ರೊದೀತನು" ಎಂಬುದರ ಸಂಕುಚಿತಗೊಳಿಸಲ್ಪಟ್ಟ ಹೆಸರಾಗಿದೆ. ಪೌಲನು ದೀರ್ಘವಾದ ಹೆಸರಿನ ವ್ಯಕ್ತಿಯನ್ನು ಪ್ರಯಾಣದಲ್ಲಿ ಜೊತೆಗಾರನನ್ನಾಗಿ ಹೊಂದಿದ್ದನು – ಆ ಸಹೋದರರನ್ನು ಪೌಲನು ಫಿಲಿಪ್ಪಿಗೆ ಕಳುಹಿಸಿ ಕೊಟ್ಟನು (ಫಿಲಿಪ್ಪಿ 2:25; 4:18). ಆ ಎಪಫ್ರೊದೀತನನ್ನು ಇದೇ ಎಪಫ್ರನೆಂದು ಗಲಿಬಿಲಿ ಮಾಡಿಕೊಳ್ಳಕೂಡದು, ಯಾಕೆಂದರೆ ಎಪಫ್ರನು ಕೊಲೊಸ್ಸೆಯ ಊರಿನವನೇ ಆಗಿದ್ದನು. ಕೊಲೊಸ್ಸೆಗೆ ಸುವಾರ್ತೆಯನ್ನು ಕೊಂಡೊಯ್ದ ಮೊದಲಿಗನು ಎಪಫ್ರನೇ ಆಗಿದ್ದನು. ಪೌಲನು ಕೊಲೊಸ್ಸೆಯವರಿಗೆ ಮತ್ತು ಫಿಲೆಮೋನನಿಗೆ ಪತ್ರಿಕೆಗಳನ್ನು ಬರೆಯುವ ವೇಳೆ, ಎಪಫ್ರನು ಆತನ ಜೊತೆಯಲ್ಲಿದ್ದನು. ಪೌಲನು ಕೊಲೊಸ್ಸೆ, ಲವೊದಿಕೀಯ, ಮತ್ತು ಹಿರಿಯಾಪೊಲಿಯಗಳಲ್ಲಿರುವ ಸಭೆಗಳ ಕುರಿತ ಮಾಹಿತಿಯನ್ನು ಎಪಫ್ರನಿಂದ ಪಡೆದುಕೊಂಡನು. ಬಹುಶಃ ಪೌಲನು ಎಫೆಸದಲ್ಲಿ ಸುವಾರ್ತೆಯನ್ನು ಸಾರುತ್ತಿದ್ದ ವೇಳೆಯಲ್ಲಿ, ಈತನ ಈ ಪಟ್ಟಣಗಳಲ್ಲಿ ಬೋಧನೆ

ಮಾಡಿದ್ದಿರಬಹುದಾಗಿದೆ (ನೋಡಿರಿ ಅಪೊಸ್ತಲರ ಕೃತ್ಯಗಳು 19:10). ಸ್ಪಷ್ಟವಾಗಿರುವಂತೆ, ಸಭೆಗಳ ಪರಿಸ್ಥಿತಿಯ ಬಗ್ಗೆ ಪೌಲನಿಗೆ ತಿಳಿಯಪಡಿಸುವದಕ್ಕಾಗಿ ಮತ್ತು ಆತನ ಸೆರೆವಾಸದಲ್ಲಿ ಆತನೊಂದಿಗೆ ಇರುವದಕ್ಕಾಗಿ ಆತನು ರೋಮಾಪುರಕ್ಕೆ ಪ್ರಯಾಣವನ್ನು ಮಾಡಿದನು.

ಕ್ರಿಸ್ತನಿಗೆ ಎಪಫ್ರನು ಮಾಡಿದ ಸೇವೆ ಮತ್ತು ಸಮರ್ಪಣೆಯ ಕುರಿತು ಪೌಲನು ಘನವಾಗಿ ಯೋಚಿಸಿದನು. ಆತನು ಅವನನ್ನು "ಕ್ರಿಸ್ತ ಯೇಸುವಿನ ನಿಮಿತ್ತವಾಗಿ ನನ್ನ ಜೊತೆಯ ಸೆರೆಯವನು" ಎಂದು ಕರೆದನು (ಫಿಲೆಮೋನ 23), "ನಮ್ಮ ಪ್ರಿಯ ಜೊತೆಯ ದಾಸನಾದ . . . ನಿಮಗೋಸ್ಕರ ಕ್ರಿಸ್ತನ ನಂಬಿಗಸ್ತ ಸೇವಕ" (ಕೊಲೊಸ್ಸೆ 1:7), ಮತ್ತು "ಕ್ರಿಸ್ತ ಯೇಸುವಿನ ದಾಸನಾಗಿರುವ" (ಕೊಲೊಸ್ಸೆ 4:12) ಎಂದು ಕರೆದನು. ಪೌಲನು ತನ್ನನ್ನು ಸೂಚಿಸಿಕೊಳ್ಳುವದಕ್ಕೆ ಅನೇಕ ಸಾರಿ "ದಾಸನು" ಎಂಬ ಪದವನ್ನು ಬಳಸಿಕೊಂಡನು, ಆದರೆ ಇತರರನ್ನು ಸೂಚಿಸುವದಕ್ಕೆ ಎರಡು ಸಾರಿ ಮಾತ್ರವೇ ಬಳಸಿದನು – ಎಪಫ್ರನು (4:12) ಮತ್ತು ತಿಮೊಥೆ (ಫಿಲಿಪ್ಪಿ 1:1).

### "ನಮ್ಮ ಪ್ರಿಯ ಜೊತೆಯ ದಾಸನಾದ" (1:7)

ಪೌಲನು ಕ್ರೈಸ್ತರಿಗಾಗಿ ಮತ್ತು ತನ್ನ ಜೊತೆ ಸೇವೆ ಮಾಡಿದ ಇತರರಿಗಾಗಿ ಹೊಂದಿದ್ದ ಪ್ರೀತಿಯು ಎಪಫ್ರನಿಗೆ ವ್ಯಕ್ತಪಡಿಸಿದ ಅದೇ ಪ್ರೀತಿಯಂತೆಯೇ ಆಗಿತ್ತು. ಆತನು ಆಗಾಗ್ಗೆ ತನ್ನ ಜೊತೆಯ ಕೆಲಸಗಾರರನ್ನು ಸೂಚಿಸಿ **ಪ್ರಿಯ** (ἀγαπητός, *agapētos*) ಎಂಬ ಪದವನ್ನು ಬಳಸುತ್ತಿದ್ದನು: ಎಪೈನೆತನು (ರೋಮಾ 16:5), ಅಂಪ್ಲಿಯಾತನು (ರೋಮಾ 16:8), ಸ್ತಾಖುನನು (ರೋಮಾ 16:9), ಪೆರ್ಸೀಸಳು (ರೋಮಾ 16:12), ತಿಮೊಥೆ (1 ಕೊರಿಂಥ 4:17; 2 ತಿಮೊಥೆ 1:2), ತುಖಿಕನು (ಕೊಲೊಸ್ಸೆ 4:7; ಎಫೆಸ 6:21), ಒನೇಸಿಮನು (ಕೊಲೊಸ್ಸೆ 4:9), ಲೂಕ (ಕೊಲೊಸ್ಸೆ 4:14), ಮತ್ತು ಫಿಲೆಮೋನ (ಫಿಲೆಮೋನ 1). ವಿವಿಧ ಸಭಿಕರಿಗೆ ಬರೆಯುವ ವೇಳೆಯಲ್ಲಿ, ಆತನು ಅವರನ್ನು ಪದೇ ಪದೇ "ಪ್ರಿಯರೇ" ಎಂದು ಕರೆದನು. ಪೌಲನು ರೋಮಾಪುರಕ್ಕೆ ಇದುವರೆಗೂ ಭೇಟಿಯನ್ನು ಕೊಡದಿದ್ದಾಗ್ಯೂ, ಆತನು ರೋಮಾಪುರದಲ್ಲಿರುವ ಸಭೆಯನ್ನು "ಪ್ರಿಯರೇ" ಎಂದು ಸಂಬೋಧಿಸಿದನು (ರೋಮಾ 12:19). ರೋಮಾಪುರದಲ್ಲಿರು ಜನರಿಗೆ ವೈಯಕ್ತಿಕವಾದ ವಂದನೆಗಳನ್ನು ಹೇಳುವ ವೇಳೆ, ಆತನಿಗೆ ಆ ಸಭೆಯ ಸದಸ್ಯರ ಪರಿಚಯವಿತ್ತು ಎಂಬ ಸೂಚನೆ ನೀಡುತ್ತಾನೆ. ಆತನು ಕೊಲೊಸ್ಸೆಯ ಸಭೆಯ ವಿಷಯದಲ್ಲಿ "ಪ್ರಿಯರೇ" ಎಂಬದನ್ನು ಬಳಸಲಿಲ್ಲ, ಬಹುಶಃ ಆತನು ಅವರಲ್ಲಿ ಅನೇಕರನ್ನು ವೈಯಕ್ತಿಕವಾಗಿ ಭೇಟಿಯಾಗಿರಲಿಲ್ಲ ಎಂಬ ಕಾರಣಕ್ಕಾಗಿ ಇರಬಹುದು.

ಪೌಲನ ಮಾತುಗಳಲ್ಲಿ, ಎಪಫ್ರನು **ದಾಸನಾಗಿದ್ದನು** (συνδοῦλος, *sundoulos*), ಅದು *sun*, "ಯೊಂದಿಗೆ" ಮತ್ತು *doulos*, "ಗುಲಾಮ" ಎಂಬ ಎರಡು ಪದಗಳ ಸಂಯೋಜನೆಯಾಗಿದೆ. ಆತನು ತನ್ನನ್ನು ಯೇಸುವಿನ ದಾಸನು – ತನಗೆ ಸೇರಿದವನಲ್ಲ ಆದರೆ ಯೇಸುವಿಗೆ ಸೇರಿದವನು ಎಂದು ಪರಿಗಣಿಸಿಕೊಂಡಿದ್ದ – ಪೌಲನ ಜೊತೆಯಲ್ಲಿ ಸೇವೆ ಮಾಡಿದನು. ಆತನು ಕೊರಿಂಥದವರಿಗೆ ಇದೇ ರೀತಿಯಲ್ಲಿ ಅವರ ವಿಷಯದಲ್ಲಿಯೂ ಅಷ್ಟೇ ಸತ್ಯವಾದದ್ದೆಂದು ಜ್ಞಾಪಕಗೊಳಿಸಿದನು (1 ಕೊರಿಂಥ 6:19). ಕ್ರಿಸ್ತನ ಸಭೆಯ ಸದಸ್ಯರಾಗಿ, ಅವರು ಯೇಸುವಿನ ರಕ್ತದಿಂದ ಕೊಂಡುಕೊಳ್ಳಲ್ಪಟ್ಟಿದ್ದರು (ಅಪೊಸ್ತಲರ

ಕೃತ್ಯಗಳು 20:28). ಪೌಲನು ಎಪಫ್ರನನ್ನ ಯೇಸುವಿನ ದಾಸನು ಮಾತ್ರವಲ್ಲದೆ ತಾನು ಜೊತೆಗೂಡಿ ಯೇಸುವಿನ ಸೇವೆ ಮಾಡುವಂಥ ಜೊತೆಯ ದಾಸನೆಂದು ಸಹ ಪರಿಗಣಿಸಿದ್ದನು.

ಯೇಸು ತನ್ನ ಸಾಮ್ಯಗಳೊಂದರಲ್ಲಿ ಧಾರ್ಮಿಕವಲ್ಲದ ಅರ್ಥದಲ್ಲಿ **ಜೊತೆಯ** ದಾಸರ ಬಗ್ಗೆ ಉಲ್ಲೇಖಿಸಿದನು (ಮತ್ತಾಯ 18:28-33). ಪೌಲನ ಬರಹಗಳಲ್ಲಿ ಕಾಣಿಸಿಕೊಳ್ಳುವ ಇನ್ನು ಒಂದೇ ಸಂದರ್ಭದಲ್ಲಿ, ಅದು ತುಖಿಕನಿಗೆ ಅನ್ವಯಿಸಲ್ಪಟ್ಟಿರುತ್ತದೆ.

### "ಅವನು ನಿಮಗೋಸ್ಕರ ಕ್ರಿಸ್ತನ ನಂಬಿಗಸ್ತ ಸೇವಕನು" (1:7)

ಪೌಲನು ಎಪಫ್ರನನ್ನು ಒಬ್ಬ **ನಂಬಿಗಸ್ತನಾದ ಸೇವಕನು** (πιστὸς, *pistos*) ಎಂದು ಬಣ್ಣಿಸಿದನು. "ನಂಬಿಗಸ್ತನಾದ" ಎಂಬುದು ವಾಡಿಕೆಯ ಪ್ರಕಾರ ಸೇವೆಯಲ್ಲಿ ಸ್ಥಿರವಾಗಿರುವವನನ್ನು ಬಣ್ಣಿಸುತ್ತದೆ, ಅದು ಜನರಿಗೆ ಸೇವೆಯಾಗಿರಬಹುದು (ಮತ್ತಾಯ 24:45; 25:21; ಲೂಕ 12:42) ಅಥವಾ ದೇವರಿಗೆ ಸೇವೆಯಾಗಿರಬಹುದು (1 ಕೊರಿಂಥ 1:9). ಒಬ್ಬ ವ್ಯಕ್ತಿಗೆ ನಂಬಿಗಸ್ತನಾಗಿರುವದನ್ನು ಸೂಚಿಸಲು ಬಳಸಲ್ಪಟ್ಟಾಗ, ಈ ಪದವಿ ಸಮರ್ಪಣೆಯುಳ್ಳ ಸೇವೆ ಎಂಬ ಅರ್ಥವನ್ನು ಕೊಡುತ್ತದೆ. ಅದು ವಿಶ್ವಾಸರ್ಹತೆ ಎಂದು ಸಹ ಅರ್ಥವನ್ನು ಕೊಡಬಹುದಾಗಿದೆ, ಉದಾಹರಣೆಗೆ "ವಾಕ್ಯವು ನಂಬತಕ್ಕದ್ದಾಗಿಯೂ" ಎಂಬ ರೀತಿಯಲ್ಲಿ (1 ತಿಮೊಥೆ 1:15; 3:1). ಕೆಲವು ಸಂದರ್ಭಗಳಲ್ಲಿ, ದೇವರಿಗೆ ನಂಬಿಗಸ್ತರಾಗಿರುವದನ್ನು ಸೂಚಿಸಿ ಬಳಸಲ್ಪಟ್ಟಾಗ, ಅದು ಕ್ರೈಸ್ತನಾಗಿರುವ ಒಬ್ಬನನ್ನು ಸೂಚಿಸುವದಾಗಿದೆ (ಉದಾಹರಣೆಗೆ, ನೋಡಿರಿ 1 ತಿಮೊಥೆ 1:12).

"ಸೇವಕ" ಎಂಬ ಪದವು 7ನೇ ವಚನದಲ್ಲಿ ಬಳಸಲ್ಪಟ್ಟಿರುವ "ದಾಸನು" ಎಂಬುದಕ್ಕಾಗಿರುವ ಪದಕ್ಕಿಂತ ವ್ಯತ್ಯಾಸವಾದದ್ದಾಗಿದೆ. ಇಲ್ಲಿ "ಸೇವಕ" διάκονος (*diakonos*) ಎಂಬುದರ ಅರ್ಥವು ಅಧೀನನಾಗಿ ಸೇವೆಯನ್ನು ಸಲ್ಲಿಸುವ ವ್ಯಕ್ತಿ ಎಂದಾಗಿರುತ್ತದೆ. ಇದು ಸಾಮಾನ್ಯವಾಗಿ, ಇತತರಿಗೆ ಸೇವೆ ಅಥವಾ ಚಾಕರಿ ಮಾಡುವವರನ್ನು ಸೂಚಿಸಿ ಬಳಸಲ್ಪಡುತ್ತದೆ (ಮತ್ತಾಯ 20:26; 23:11) — ಉದಾಹರಣೆಗೆ, ಸೇವಕರು (ಮತ್ತಾಯ 22:13; ಯೋಹಾನ 2:5), ಸರ್ಕಾರ (ರೋಮಾ 13:4), ದೇವರ ಸೇವೆಯನ್ನು ಮಾಡುವವರು (2 ಕೊರಿಂಥ 6:4), ಸೈತಾನನ ಸೇವೆ ಮಾಡುವವರು (2 ಕೊರಿಂಥ 11:15), ಮತ್ತು ಸೇವಕರಾಗಿ ಸೇವೆ ಮಾಡುವವರು (ಫಿಲಿಪ್ಪಿ 1:2; 1 ತಿಮೊಥೆ 3:8, 12). ಪೌಲನು ತನ್ನನ್ನು ಸೂಚಿಸಿ ಅದೇ ಪದವನ್ನು ಬಳಸಿಕೊಂಡನಾದ್ದರಿಂದ (ಕೊಲೊಸ್ಸೆ 1:23), ಎಪಫ್ರನು ಸಭೆಯ ಸೇವಕನಾಗಿದ್ದನೋ ಎಂಬ ವಿಷಯವಾಗಿ ಯಾವದೇ ಅಂತಿಮ ನಿರ್ಣಯಕ್ಕೆ ಬರುವದಕ್ಕಾಗುವದಿಲ್ಲ. ಅದೇ ಅರ್ಥವನ್ನು ಕೊಡುವ ಇನ್ನೊಂದು ಗ್ರೀಕ್ ಪದವು, διακονία (*diakonia*, "ಸೇವೆ" ಎಂದು ಅನುವಾದಿತ), ಸಭಾ ಸೇವಕ ಹುದ್ದೆಯನ್ನು ಸೂಚಿಸಿ ಎಂದಿಗೂ ಬಳಸಲ್ಪಟ್ಟಿರುವದಿಲ್ಲ (ಅಪೊಸ್ತಲರ ಕೃತ್ಯಗಳು 1:17; 6:4; ಅಲ್ಲದೆ ರೋಮಾ 12:7ನ್ನು ಸಹ ನೋಡಿರಿ, ಅಲ್ಲಿ ಈ ಪದದ ರೂಪಗಳು "ಸೇವೆ" ಮತ್ತು "ಸೇವೆಯನ್ನು ಮಾಡುತ್ತಾ" ಎಂದು ಅನುವಾದಿಸಲ್ಪಟ್ಟಿರುತ್ತವೆ).

ಎಪಫ್ರನು ಕ್ರಿಸ್ತನ ನಂಬಿಗಸ್ತ ಸೇವಕನಂತೆ ಪೌಲನಿಗೆ ಆತನ ಸೇವೆಯಲ್ಲಿ ಬೆಂಬಲವನ್ನು ಮತ್ತು ಸಹಾಯವನ್ನು ಮಾಡುತ್ತಿದ್ದನು. ಪೌಲನಿಗೆ ಸಹಾಕನಾಗಿರುವದರಲ್ಲಿ, ಆತನು ಬೋಧನೆ ಮಾಡಿದ ಜನರಿಗೆ ಸಹ ಆತನು ಸಹಾಯ ಮಾಡುವವನಾಗಿದ್ದನು.

"ನಮಗೋಸ್ಕರ ಕ್ರಿಸ್ತನ ನಂಬಿಗಸ್ತನಾದ ಸೇವಕನು" (ಆಂಗ್ಲದ ತರ್ಜುಮೆಯಲ್ಲಿರುವ ಪ್ರಕಾರ) ಎಂಬ ಪದಗುಚ್ಛದಲ್ಲಿರುವ **ನಮಗೋಸ್ಕರ** (ἡμῶν, *hēmōn*) ಎಂಬುದಕ್ಕಾಗಿ ಗ್ರೀಕ್.ನಲ್ಲಿ ಭಿನ್ನತೆಯಿರುತ್ತದೆ. ಕೆಲವು ತರ್ಜುಮೆಗಳು "ನಮಗೋಸ್ಕರ" ಎಂದು ಹೊಂದಿದ್ದರೆ (NASB; NIV; NEB; TEV; ASV; RSV); ಇನ್ನು ಕೆಲವು ತರ್ಜುಮೆಗಳು (ὑμῶν, *humōn*; KJV; CEV) ಎಂಬುದರ ಅನುವಾದವಾಗಿ "ನಿಮಗಾಗಿ" ಎಂದು ಹೊಂದಿರುತ್ತವೆ. ನಾಲ್ಕನೆಯ, ತಿದ್ದಿ ಸರಿಪಡಿಸಲಾದ ಆವೃತ್ತಿಯಾದ *The Greek New Testament*ವು *humōn* "ನಿಮಗೆ" ಎಂಬುದಕ್ಕೆ ಒಲವು ತೋರಿಸುತ್ತದೆ.[14] ಅಧಿಕಾರದ ಮಹತ್ವಪೂರ್ಣತೆ ನಿರ್ಣಾಯಕವಾಗಿ ಇರುವದಿಲ್ಲವಾದ್ದರಿಂದ, ಎರಡರಲ್ಲಿ ಯಾವದನ್ನಾದರೂ ಅಂಗೀಕರಿಸಿಕೊಳ್ಳಬಹುದಾಗಿದೆ. ಎರಡರಲ್ಲಿ ಯಾವದೇ ಅನುವಾದದಲ್ಲಿಯೂ ಅರ್ಥವು ಅಷ್ಟೇನೂ ಹೆಚ್ಚು ವ್ಯತ್ಯಾಸಗೊಳ್ಳುವದಿಲ್ಲ. *Humōn* ಎಂಬುದು ಸರಿಯಾದ ವಾಚನವಾಗಿದ್ದಲ್ಲಿ, ಎಪಫ್ರನು ಪೌಲನ ಸುವಾರ್ತಾ ಸಾರುವಿಕೆಯಲ್ಲಿ ಸಹಾಯ ಮಾಡಿದನು, ಹೀಗೆ ಪೌಲನಿಗೆ ಮತ್ತು ಆತನನ್ನು ಆಲಿಸಿದವರಿಗೆ ಪ್ರಯೋಜನವನ್ನುಂಟು ಮಾಡಿದನು ಎಂದಾಗುತ್ತದೆ. ಒಂದು ವೇಳೆ *hēmōn* ಎಂಬುದು ಸರಿಯಾಗಿದ್ದರೆ, ಕೊಲೊಸ್ಸೆಯವರಿಗೆ ಕ್ರಿಸ್ತನ ಸಂದೇಶಕನಾಗಿ ಎಪಫ್ರನು ಪೌಲನ ಪೂರ್ಣ ಅನುಮೋದನೆಯನ್ನು ಹೊಂದಿದ್ದನೆಂಬುದನ್ನು ಪೌಲನು ಸೂಚಿಸುತ್ತಿದ್ದಾನೆ ಎಂದಾಗುತ್ತದೆ.

### "ಪವಿತ್ರಾತ್ಮ ಪ್ರೇರಿತವಾದ ನಿಮ್ಮ ಪ್ರೀತಿಯ ವಿಷಯದಲ್ಲಿ ನನಗೆ ತಿಳಿಸಿದವನು ಅವನೇ" (1:8)

ಕೊಲೊಸ್ಸೆಯವರು ದೇವರ ಕೃಪೆಯ ವಿಷಯವಾಗಿ ಎಪಫ್ರನಿಂದ ಕಲಿತುಕೊಂಡಿದ್ದರು. ಆತನು ಅವರಿಗೆ ಬೋಧನೆಯನ್ನು ಮಾಡಿದ್ದು ಮಾತ್ರವಲ್ಲದೆ, ಅವರ ವಿಷಯದಲ್ಲಿ ಒಂದು ಒಳ್ಳೇ ವರದಿಯನ್ನು ಸಹ ಹಿಂದಕ್ಕೆ ತೆಗೆದುಕೊಂಡು ಬಂದನು. ಆತನು ಪೌಲ ಮತ್ತು ತಿಮೊಥೆಯರಿಗೆ ಕೊಟ್ಟ ವರದಿಯಲ್ಲಿ ಕೊಲೊಸ್ಸೆಯವರ ಪ್ರೀತಿ ಮತ್ತು ಆತ್ಮೀಕ ಬೆಳವಣಿಗೆಗಳು ಸೇರಿದ್ದವು. ಕೆಲವು ವಚನಗಳ ಮುಂಚೆಯಷ್ಟೇ (1:4), ಅವರು ದೇವಜನರೆಲ್ಲರ ಮೇಲಿಟ್ಟಿರುವ ಪ್ರೀತಿಗಾಗಿ ಪೌಲನು ಅವರನ್ನು ಪ್ರಶಂಸಿಸಿದ್ದನು. ಈಗ ಆತನು ತನಗೆ ಮಾಹಿತಿ ತಂದ ಮೂಲವನ್ನು ಬಯಲುಪಡಿಸುತ್ತಿದ್ದಾನೆ – ಎಪಫ್ರನಿಂದ ಬಂದ ಒಂದು ವರದಿ.

ಕೊಲೊಸ್ಸೆಯವರ **ಪವಿತ್ರಾತ್ಮ ಪ್ರೇರಿತ ಪ್ರೀತಿ**ಯ ಬಗ್ಗೆ ಉಲ್ಲೇಸುವದರಲ್ಲಿ, ಪೌಲನು ಪವಿತ್ರಾತ್ಮನೆಂಬ ಅರ್ಥದಲ್ಲಿ ಹೇಳಿದನೋ? ಬಹುಪಾಲು ಅನುವಾದಕರು 8ನೇ ವಚನದಲ್ಲಿ ಆತ್ಮ πνεῦμα (*pneuma*) ಎಂಬುದಕ್ಕೆ ದೊಡ್ಡ S ಬಳಸುತ್ತಾರೆ, ಅಂದರೆ ಪೌಲನು ಪವಿತ್ರಾತ್ಮನನ್ನು ಸೂಚಿಸಿ ಹೇಳಿದನೆಂದು ಅವರು ನಂಬುತ್ತಾರೆ ಎಂದರ್ಥವಾಗುತ್ತದೆ. ಕೊಲೊಸ್ಸೆ 2:5ರಲ್ಲಿ, ಗ್ರೀಕ್.ನಲ್ಲಿ ನಿರ್ದೇಶಕ ಗುಣವಾಚಿ "the" ಬಳಸಲ್ಪಟ್ಟಿದ್ದು,[15] ಅಲ್ಲಿ ಪೌಲನ ಆತ್ಮನನ್ನು ಸೂಚಿಸಿ ಹೇಳಲಾಗಿರುತ್ತದೆಂದು ಅಭಿಪ್ರಾಯವಿರುತ್ತದೆ. ಕೊಲೊಸ್ಸೆಯವರಿಗೆ ಪತ್ರಿಕೆಯ ಈ ಎರಡು ಸ್ಥಳಗಳಲ್ಲಿ ಮಾತ್ರವೇ *pneuma* ಕಾಣಿಸಿಕೊಂಡಿರುತ್ತದೆ. 8ನೇ ವಚನದಲ್ಲಿ ಪವಿತ್ರಾತ್ಮನನ್ನು ಸೂಚಿಸಿ ಹೇಳಿಲ್ಲವಾದರೆ, ಪೌಲನು ತನ್ನ ಈ ಪತ್ರಿಕೆಯಲ್ಲಿ ಪವಿತ್ರಾತ್ಮನನ್ನು ಉಲ್ಲೇಖಿಸಲಿಲ್ಲವೆಂದಾಗುತ್ತದೆ.

ಪೌಲನು ತನ್ನ ಪತ್ರಿಕೆಗಳಲ್ಲಿ ಪವಿತ್ರಾತ್ಮನನ್ನು ಉಲ್ಲೇಖಿಸುವಾಗ, ಪೌಲನು

ವಾಡಿಕೆಯಂತೆ "ಆತ್ಮ" ಎಂಬುದನ್ನು "ಪವಿತ್ರ" ಎಂದು ತಿದ್ದುತ್ತಿದ್ದನು (ರೋಮಾ 5:5; 9:1) ಅಥವಾ "ಆತ್ಮ" ಎಂಬುದರ ಮುಂಚೆ ಒಂದು ಗುಣವಾಚಿಯನ್ನು ಸೇರಿಸುತ್ತಿದ್ದನು (ರೋಮಾ 2:29; 8:26, 27; ಗಲಾತ್ಯ 3:2; 5:22). ಹೇಗೂ, ಗುಣವಾಚಿ ಬಳಕೆಯಲ್ಲಿ ಆತನು ಯಾವಾಗಲೂ ಸ್ಥಿರವಾಗಿರಲಿಲ್ಲ (ಎಫೆಸ 3:5 ಮತ್ತು 4:4ನ್ನು ಹೋಲಿಸಿರಿ). ಈ ಕಾರಣಕ್ಕಾಗಿ, ಗುಣವಾಚಿ ಬಳಸಲ್ಪಡದಿದ್ದ ಸಂದರ್ಭದಲ್ಲಿ ಅನುವಾದಕರು ಒಂದು ವಿವೇಚನೆಯ ತೀರ್ಮಾನವನ್ನು ಮಾಡಬೇಕು. William Hendriksen ಈ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ:

> ಇದು [8ನೇ ವಚನ] "ಆತ್ಮೀಕ ಪ್ರೀತಿ" ಎಂದಷ್ಟೆ ಅರ್ಥವಾಗಿರುತ್ತದೆಂದು ಪವಿತ್ರಾತ್ಮನನ್ನು ಸೂಚಿಸದೆಯೇ ವಾದಿಸುವವರು ಇದ್ದಾರೆ, ಈ ಅಭಿಪ್ರಾಯವು ರೋಮಾ 15:30; ಗಲಾತ್ಯ 5:22; ಮತ್ತು ಎಫೆಸ 3:16, 17ರಂತಹ ವಾಕ್ಯಭಾಗಗಳಲ್ಲಿ ಕ್ರೈಸ್ತ ಪ್ರೀತಿಯು ನಿರ್ಧಾರಿತವಾಗಿ ಒಳಗೆ ವಾಸವಾಗಿರುವ ಪವಿತ್ರಾತ್ಮನ ಫಲವಾಗಿದೆಯೆಂದು ಪರಿಗಣಿಸಲಾಗುತ್ತದೆಂಬ ವಾಸ್ತವಾಂಶಕ್ಕೆ ವಿರುದ್ಧವಾಗಿ ಸಾಗುವದಾಗಿದೆ.[16]

8ನೇ ವಚನದಲ್ಲಿ ಪೌಲನು ಪವಿತ್ರಾತ್ಮನನ್ನು ಸೂಚಿಸಿ ಹೇಳಿದ್ದಲ್ಲಿ, ಆತನು ಕೊಲೊಸ್ಸೆಯವರನ್ನು ಪವಿತ್ರಾತ್ಮನ ಗುಣಲಕ್ಷಣಗಳೊಂದಿಗೆ ಸಾಮರಸ್ಯದಲ್ಲಿದ್ದವರೆಂದು ಪರಿಗಣಿಸಿದ್ದನ್ನು ಎಂಬ ತೀರ್ಮಾನಕ್ಕೆ ಬರಬಹುದಾಗಿದೆ. ಆವರು ಪ್ರೀತಿಯು ಸೇರಿದಂತೆ, ಪವಿತ್ರಾತ್ಮನ ಫಲಗಳನ್ನು ಹೊಂದಿದವರಾಗಿದ್ದರು (ಎಫೆಸ 5:9).

ಗ್ರೀಕ್ ವಾಕ್ಯದಲ್ಲಿ "ಆತ್ಮ" ಎಂಬುದರ ಮುಂದೆ ಯಾವದೇ ಗುಣವಾಚಿ ಕಾಣಿಸಿಕೊಳ್ಳುವದಿಲ್ಲವಾದ್ದರಿಂದ, ಪೌಲನು ಪವಿತ್ರಾತ್ಮನು ಎಂಬುದರ ಬದಲಾಗಿ "ಆತ್ಮನಲ್ಲಿ" (ಮಾನವ ಆತ್ಮ) ಎಂಬರ್ಥದಲ್ಲಿ ಹೇಳಿರಬಹುದಾಗಿದೆ. ಬಹುಪಾಲು ಪ್ರಸಿದ್ಧ ತರ್ಜುಮೆಗಳು "ಆತ್ಮನಲ್ಲಿ" ಎಂದು ಹೋಂದಿವೆ. ಇತರ ತರ್ಜುಮೆಗಳು "ಆತ್ಮನಲ್ಲಿ ಪ್ರೀತಿ"[17] ಮತ್ತು "ನಿಮ್ಮ ಆತ್ಮೀಕ ಮಮತೆ"[18] ಎಂದು ಹೊಂದಿವೆ.

"ಆತ್ಮದಲ್ಲಿ" ಎಂಬುದೇ ಪೌಲನ ತಾತ್ಪರ್ಯವಾಗಿದ್ದಲ್ಲಿ, ಅದರರ್ಥವು ಯೋಹಾನ 4:23, 24ರಲ್ಲಿ ಆರಾಧನೆಯ ಸನ್ನಿವೇಶದಲ್ಲಿ ಯೇಸು "ಆತ್ಮ" ಬಳಕೆಯಂತೆಯೇ ಅದು ಸಹ ಆಗಿರುತ್ತದೆ, ಈ ವಚನಗಳಲ್ಲಿ ಅನೇಕ ತರ್ಜುಮೆಗಳು "ಆತ್ಮನಲ್ಲಿ" ಎಂದು ಹೊಂದಿರುತ್ತವೆ (KJV; NASB; NIV; NKJV; NRSV; RSV). ಅರ್ಥವು ಏನಾಗಿರಬಹುದೆಂದರೆ ಅವರ ಪ್ರೀತಿಯು ಕೇವಲ ಬಾಹ್ಯ ತೋರ್ಪಡುವಿಕೆ ಮಾತ್ರವಾಗಿರಲಿಲ್ಲ, ಆದರೆ ಅದು ಮಾನವ ಆತ್ಮದ ಆಳದೊಳಗಿಂದ ಹೊರಹೊಮ್ಮಿದ ಒಂದು ಪ್ರೀತಿಯಾಗಿತ್ತು ಎಂಬದೆ. ಅಂಥದ್ದು ಅವರ ಪ್ರೀತಿಯ ಯಥಾರ್ಥತೆಯನ್ನು ತೋರ್ಪಡಿಸುವದು.

## ಅನ್ವಯಿಸುವಿಕೆ

### ಸ್ತೋತ್ರಾರ್ಪಣೆಯ ಪ್ರಾರ್ಥನೆ (1:3-6)

ಬಹಳಷ್ಟು ಸಾರಿ ನಮ್ಮ ಪ್ರಾರ್ಥನೆಗಳು ಸ್ವಾರ್ಥದಿಂದ ಕೂಡಿರುತ್ತವೆ. ನಾವು ಇತರರಿಗೋಸ್ಕರ ದೇವರನ್ನು ಸ್ತೋತ್ರ ಮಾಡಿ ಬೇಡಿಕೊಳ್ಳುವ ಬದಲಾಗಿ ನಮಗೆ ಬೇಕಾದ ಆಶೀರ್ವಾದಗಳಿಗಾಗಿ ನಿರಂತರವಾಗಿ ವಿಜ್ಞಾಪಿಸಿಕೊಳ್ಳುತ್ತಿರುತ್ತೇವೆ. ಯೇಸುವಿನ

ಪ್ರಾರ್ಥನೆಗಳು ಬಹಳಷ್ಟು ಸಾರಿ ತನಗೋಸ್ಕರವಲ್ಲದೆ ಬೇರೆಯವರಿಗೋಸ್ಕರವೇ ಆಗಿರುತ್ತಿದ್ದವು (ಲೂಕ 22:31, 32; ಯೋಹಾನ 17:6-26; ಲೂಕ 23:34). ತಾನು ಅವರಿಗೋಸ್ಕರ ಸ್ತೋತ್ರದ ಪ್ರಾರ್ಥನೆಯನ್ನು ಅರ್ಪಿಸುತ್ತಿದ್ದಾನೆಂಬುದನ್ನು ಪೌಲನು ಕೊಲೊಸ್ಸೆಯವರಿಗೆ ತಿಳಿಯಪಡಿಸಿದನು.

1. *ಅವರ ನಂಬಿಕೆ ಮತ್ತು ಪ್ರೀತಿಗಳಿಗಾಗಿ ಆತನು ಸ್ತೋತ್ರ ಮಾಡಿದನು.* ಕ್ರೈಸ್ತ ನಂಬಿಕೆಯು ಕುರುಡು ನಂಬಿಕೆಯಲ್ಲ, ಆದರೆ ಅದು ಪುರಾವೆಯ ಮೇಲೆ ಆಧಾರವಾದದ್ದು. ವಿಶ್ವದಲ್ಲೆಲ್ಲಾ ವಿನ್ಯಾಸದ ಪುರಾವೆಯಿದ್ದು ಆ ಮೂಲಕ ವಿನ್ಯಾಸಗಾರನೊಬ್ಬನಿದ್ದಾನೆ ಎಂಬುದಕ್ಕೆ ಪುರಾವೆಯಿರುತ್ತದೆ (ಕೀರ್ತನೆ 19:1; ರೋಮಾ 1:19, 20; ಇಬ್ರಿಯ 3:4). ದೇವರು ಇದ್ದಾನೆಂದು ನಂಬಿಕೆಯಿರುವ ಹೊರತು ಒಬ್ಬನು ದೇವರನ್ನು ಮೆಚ್ಚಿಸಲಾರನು. ರಕ್ಷಣೆಯು ನಂಬಿಕೆಯ ಮತ್ತು ಕೃಪೆಯ ಮುಖಾಂತರ ಬರುತ್ತದೆ (ಎಫೆಸ 2:8, 9), ಯಾಕೆಂದರೆ ನಂಬಿಕೆಯ ಮೂಲಕವೇ ನಮಗೆ ಕೃಪೆಯ ಬಳಿಗೆ ದಾರಿಯುಂಟಾಗುತ್ತದೆ (ರೋಮಾ 5:1, 2), ಅಂದರೆ, ಅದು ಅರ್ಹತೆಯಿಂದಲ್ಲದೆ ದೇವರ ದಯೆಯಿಂದಾಗಿರುತ್ತದೆ.

ರಕ್ಷಣೆಯುಂಟು ಮಾಡುವ ನಂಬಿಕೆಯು ನಿಷ್ಕ್ರಿಯವಾದದ್ದಲ್ಲ; ಅದು ಪ್ರೀತಿಯ ಮೂಲಕ ಕ್ರಿಯೆ ಮಾಡುತ್ತದೆ (ಗಲಾತ್ಯ 5:6), ಯಾಕೆಂದರೆ ಕ್ರಿಯೆಗಳಿಲ್ಲದ ನಂಬಿಕೆ ಸತ್ತದ್ದಾಗಿದೆ (ಯಾಕೋಬ 2:17, 26). ನಂಬಿಕೆಯು ವಾಕ್ಯದ ಮೂಲಕ ಪಾಲನೆ ಮತ್ತು ಬೆಳವಣಿಗೆಗೊಳಿಸಲ್ಪಡುತ್ತದೆ (ರೋಮಾ 10:17). ನಮ್ಮ ನಂಬಿಕೆಯನ್ನು ಹೆಚ್ಚಿಸಿಕೊಳ್ಳುವದಕ್ಕಾಗಿ, ಬೆರೋಯದ ಕ್ರೈಸ್ತರಂತೆಯೇ ನಾವು ಅನುದಿನವೂ ವಾಕ್ಯವನ್ನು ಓದಬೇಕು (ಅಪೊಸ್ತಲರ ಕೃತ್ಯಗಳು 17:10, 11). ಕೂಸುಗಳು ಹಾಲನ್ನು ಬಯಸುವಂತೆಯೇ ನಾವು ಶಾಸ್ತ್ರಗಳನ್ನು ಬಯಸಬೇಕು (1 ಪೇತ್ರ 2:2), ಯಾಕೆಂದರೆ ಶಾರೀರಿಕ ಆಹಾರದಿಂದ ಮಾತ್ರವೇ ಬದುಕಲಾರೆವು. ನಮಗೆ ದೇವರ ವಾಕ್ಯದ ಆತ್ಮೀಕ ಆಹಾರದ ಅಗತ್ಯವು ಇರುತ್ತದೆ (ಮತ್ತಾಯ 4:4).

ನಮ್ಮ ನಂಬಿಕೆಗೆ ಕ್ರೈಸ್ತ ಸದ್ಗುಣಗಳು ಸೇರಿಸಿಕೊಳ್ಳಲ್ಪಡತಕ್ಕದ್ದು; ಈ ಸದ್ಗುಣಗಳಲ್ಲಿ ಅಗ್ರಸ್ಥಾನದಲ್ಲಿರುವದು ಪ್ರೀತಿಯೇ (2 ಪೇತ್ರ 1:5-7). ಪ್ರೀತಿಯು ನಮಗಾಗಿ ಏನು ಮಾಡುತ್ತದೆಂಬ ಕಾರಣಕ್ಕಾಗಿ ಅತ್ಯಂಥ ಶ್ರೇಷ್ಠ ಗುಣವಾಗಿದೆ. ಅದು ನಮ್ಮನ್ನು ದೇವರಿಗೆ ವಿಧೇಯರಾಗುವಂತೆ ಸ್ಫೂರ್ತಿಗೊಳಿಸುತ್ತದೆ (ಯೋಹಾನ 14:15, 21, 23), ಕ್ರೈಸ್ತ ಗುಣಸ್ವಭಾವಗಳನ್ನು ಬೆಳೆಸಿಕೊಳ್ಳುವಂತೆ (1 ಕೊರಿಂಥ 13:4-8), ಮತ್ತು ನಮ್ಮ ಸಹೋದರರು, ನೆರೆಯವರು, ಹಾಗೂ ನಮ್ಮ ವೈರಿಗಳ ಸಂಗಡ ಸಹ ಸಮರ್ಪಕವಾದ ಸಂಬಂಧವನ್ನಿಟ್ಟುಕೊಳ್ಳುವಂತೆ ಸ್ಫೂರ್ತಿಗೊಳಿಸುತ್ತದೆ.

ಕ್ರೈಸ್ತರು ದೇವರಿಗೆ ಪ್ರೀತಿಯನ್ನು ತೋರಿಸತಕ್ಕದ್ದು (ಮತ್ತಾಯ 22:37), ಜೊತೆ ಕ್ರೈಸ್ತರಿಗೆ (ಯೋಹಾನ 13:34), ನೆರೆಯವರಿಗೆ (ಮತ್ತಾಯ 22:39), ಮತ್ತು ವೈರಿಗಳಿಗೆ (ಮತ್ತಾಯ 5:44) ಪ್ರೀತಿಯನ್ನು ತೋರಿಸತಕ್ಕದ್ದು. ನಾವು ಕ್ರಿಸ್ತನ ಹಿಂಬಾಲಕರು ಎಂಬುದನ್ನು ಇತರರಿಗೆ ತೋರಿಸುವ ದಾರಿಯೆಂದರೆ ಕ್ರಿಸ್ತನಲ್ಲಿರುವ ನಮ್ಮ ಸಹೋದರರು ಹಾಗೂ ಸಹೋದರಿಯರಿಗಾಗಿ ಆಳವಾದ ಮತ್ತು ಶಾಶ್ವತವಾದ ಪ್ರೀತಿಯನ್ನು ಹೊಂದಿರುವದೇ ಆಗಿದೆ (ಯೋಹಾನ 13:35).

2. *ಆತನು ಅವರ ನಿರೀಕ್ಷೆಗಾಗಿ ಸ್ತೋತ್ರ ಮಾಡಿದನು.* ನಿರೀಕ್ಷೆಯು ಆತ್ಮದ ಲಂಗರು

ಆಗಿದೆ (ಇಬ್ರಿಯ 6:19). ಲಂಗರು ಹಡಗನ್ನು ಸ್ಥಿರವಾಗಿ ಹಿಡಿದಿಟ್ಟುಕೊಳ್ಳುವಂತೆಯೇ, ನಿರೀಕ್ಷೆಯು ಕ್ರೈಸ್ತರನ್ನು ಯೇಸುವಿನಿಂದ ಜಾರಿ ದೂರ ಹೋಗದಂತೆ ತಡೆಯುವದು. ಇಬ್ರಿಯ ಪತ್ರಿಕೆಯ ಲೇಖಕನು ವಾಚಕರನ್ನು ತಾವು ಕೇಳಿದ ಸಂದೇಶವನ್ನು ಬಿಟ್ಟು ಜಾರಿ ಹೋಗದಂತೆ ಎಚ್ಚರಿಸುತ್ತಾನೆ (ಇಬ್ರಿಯ 2:1-4).

ಪರಲೋಕವು ಎಲ್ಲಾ ಕ್ರೈಸ್ತರಿಗೆ ಒಂದು ನಿರೀಕ್ಷೆಯಾಗಿದೆ. ಹೊಸ ಜನನವು ನಮಗೆ ಪರಲೋಕದ ಆಶೀರ್ವಾದದ ನಿರೀಕ್ಷೆಯನ್ನು ಒದಗಿಸುತ್ತದೆ (1 ಪೇತ್ರ 1:3, 4). ಇದು ಯೇಸುವಿನ ಪುನರುತ್ಥಾನದ ಮೂಲಕ ತೋರ್ಪಡಿಸಲ್ಪಟ್ಟಿರುವ ದೇವರ ಮಹಾ ಕರುಣೆಯ ಕಾರಣದಿಂದ ಆತನಿಂದ ದೊರಕಿರುವ ಆಶೀರ್ವಾದವಾಗಿರುತ್ತದೆ. ನಾವು ದೀಕ್ಷಾಸ್ನಾನದಲ್ಲಿ ಯೇಸುವಿನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳಲ್ಲಿ ಪಾಲುಗಾರರಾಗುವಾಗ ಆತನ ಪುನರುತ್ಥಾನದ ಮೂಲಕ ರಕ್ಷಣೆಯು ಒದಗಿಸಲ್ಪಡುತ್ತದೆ (1 ಪೇತ್ರ 3:21).

ಕ್ರೈಸ್ತರು ಹೊಂದಿರಬಹುದಾದ ನಿರೀಕ್ಷೆಯೆಂದರೆ ಪುನರುತ್ಥಾನದ ನಂತರ ನಾವೆಲ್ಲರೂ ಒಟ್ಟಾಗಿ ಪರಲೋಕದಲ್ಲಿರುವೆವು ಎಂಬದೆ. ಆ ಸಮಯದ ಬಳಿಕ, ನಾವು ಮಾರ್ಪಡಿಸಲ್ಪಡುವೆವು ಎಂದು (1 ಕೊರಿಂಥ 15:51, 52), ಕ್ರಿಸ್ತನ ಸಾರೂಪ್ಯವುಳ್ಳವರಾಗಿ ರೂಪಾಂತರಗೊಳಿಸಲ್ಪಡುವೆವು ಎಂದು ವಾಗ್ದಾನ ಮಾಡಲ್ಪಟ್ಟಿರುತ್ತದೆ (ಫಿಲಿಪ್ಪಿ 3:21; 1 ಯೋಹಾನ 3:2). ಈ ನಿರೀಕ್ಷೆಯು ನಮ್ಮ ಜೀವಿತಗಳ ಮೇಲೆ ಶಾಶ್ವತವಾದ ಪ್ರಭಾವವನ್ನು ಬೀರತಕ್ಕದ್ದು.

3. *ಅಲ್ಲದೆ ಅವರು ಫಲ ಕೊಡುತ್ತಿರುವ ಬಗ್ಗೆ ಸಹ ಆತನು ಸ್ತೋತ್ರ ಮಾಡಿದನು.* ಕ್ರೈಸ್ತರು ಬೇರೆಯವರನ್ನು ರಕ್ಷಣೆಗೆ ನಡಿಸುವದಕ್ಕೋಸ್ಕರ ರಕ್ಷಿಸಲ್ಪಟ್ಟಿದ್ದಾರೆ. ಯೇಸು ತನ್ನ ಅಪೊಸ್ತಲರಿಗೆ ನಿತ್ಯಜೀವಕ್ಕಾಗಿ ಆತ್ಮಗಳ ಸುಗ್ಗಿ ಮಾಡಿಕೊಳ್ಳುವದಕ್ಕಾಗಿ ನಾಶನದಲ್ಲಿರುವ ಹೊಲಗಳನ್ನು ಹುಡುಕಿರಿ ಎಂದು ಹೇಳಿದನು (ಯೋಹಾನ 4:35, 36). ಆತನು ಬೆಳೆಯು ಬಹಳ ಆದರೆ ಕೆಲಸಗಾರರು ಕಡಿಮೆ ಎಂದು ಹೇಳಿದನು (ಮತ್ತಾಯ 9:37).

ಜೊತೆಯ ಕ್ರೈಸ್ತರು ಆತ್ಮೀಕವಾಗಿ ಬೆಳೆಯುವಾಗ ಮತ್ತು ಇತರರನ್ನು ಕ್ರಿಸ್ತನ ಬಳಿಗೆ ಕರೆತರುವಾಗ ನಾವು ಸಂತೋಷಗೊಳ್ಳಬೇಕು. ಸಹೋದರರ ಮಧ್ಯದಲ್ಲಿ ಹೊಟ್ಟೆಕಿಚ್ಚು ತಲೆಯೆತ್ತಬಾರದು. ಒಬ್ಬ ಸದಸ್ಯನು ಒಂದು ರೀತಿಯಲ್ಲಿ ಉನ್ನತಿ ಸಾಧಿಸುವಾಗ, ಆತನ ಯಶಸ್ಸಿನಲ್ಲಿ ಎಲ್ಲರೂ ಸಂತೋಷ ಪಡಬೇಕು (1 ಕೊರಿಂಥ 12:26).

ಕೊಲೊಸ್ಸೆಯಲ್ಲಿರುವ ಕೆಲವು ಸಮಸ್ಯೆಗಳು ಪೌಲನ ಗಮನಕ್ಕೆ ಬಂದಿದ್ದವು. ಆತನು ಅವುಗಳ ಬಗ್ಗೆಯೇ ಚಿಂತೆಯಲ್ಲಿ ಮುಳಗಲಿಲ್ಲ; ಬದಲಾಗಿ, ಆತನು ಸಹೋದರರಲ್ಲಿದ್ದ ಶ್ಲಾಘನೀಯ ಗುಣಗಳಾದ ನಂಬಿಕೆ, ಪ್ರೀತಿ, ನಿರೀಕ್ಷೆ, ಮತ್ತು ಫಲ ಕೊಡುವಿಕೆಗಳಿಗೋಸ್ಕರ ದೇವರನ್ನು ಸ್ತೋತ್ರ ಮಾಡಿದನು.

## ಇತರ ಕ್ರೈಸ್ತರಿಗೋಸ್ಕರ ಪ್ರಾರ್ಥಿಸುವದು (1:3-6)

ಕೆಲವು ಸಮಯಗಳಲ್ಲಿ ಹೆಚ್ಚು ಕಡಿಮೆ ಎಲ್ಲಾ ಕ್ರೈಸ್ತರಿಗೂ ಪ್ರಾರ್ಥನೆಗಳಲ್ಲಿ, ವಿಶೇಷವಾಗಿ ಬೇರೆಯವರಿಗೋಸ್ಕರ ಮಾಡುವ ಪ್ರಾರ್ಥನೆಗಳಲ್ಲಿ ಏನು ಸೇರ್ಪಡೆಗೊಳಿಸಬೇಕೆಂಬುದು ಖಚಿತವಾಗಿರುವದಿಲ್ಲ. ಬಹುಶಃ ರೋಗ ಮತ್ತು ವೈಯಕ್ತಿಕ ಅಗತ್ಯತೆಗಳಿಗಾಗಿ ಅತಿ ಹೆಚ್ಚು ಸಾರಿ ವಿಜ್ಞಾಪನೆಗಳು ಮಾಡಲ್ಪಡುತ್ತವೆ. ನಾವು ಇತರರಿಗೋಸ್ಕರ ದೇವರ ಮುಂದೆ ವಿಜ್ಞಾಪನೆ ಮಾಡುವ ವೇಳೆ ಯಾವ ಕ್ಷೇತ್ರಗಳನ್ನು

ಸೇರ್ಪಡೆಗೊಳಿಸಬೇಕೆಂಬುದಕ್ಕೆ ಪೌಲನ ಪ್ರಾರ್ಥನೆಗಳು ನಮಗೆ ಜ್ಞಾನವನ್ನು ಒದಗಿಸುತ್ತವೆ.

ತಾನು ಅವರಿಗೋಸ್ಕರ ಪ್ರಾರ್ಥಿಸುತ್ತಿದ್ದಾನೆಂಬುದನ್ನು ಪೌಲನು ಕೊಲೊಸ್ಸೆಯವರಿಗೆ ತಿಳಿಯಪಡಿಸುತ್ತಾನೆ (1:3). ಆತನು ನಿರ್ದಿಷ್ಟವಾದ ಆತ್ಮೀಕ ಆಶೀರ್ವಾದಗಳಿಗಾಗಿ, ಭಕ್ತಿಯ ಗುಣಗಳ ಬೆಳವಣಿಗೆಗಾಗಿ, ಮತ್ತು ವೈಯಕ್ತಿಕ ಅಗತ್ಯತೆಗಳಿಗಾಗಿ ಪ್ರಾರ್ಥಿಸಿದನು. ಎಲ್ಲಾ ಕ್ರೈಸ್ತರು ಹೀಗೆಯೇ ಮಾಡತಕ್ಕದ್ದು. ಕ್ರಿಸ್ತನಲ್ಲಿನ ಒಬ್ಬ ಸಹೋದರರಿಗೆ ಯಾರಾದರೊಬ್ಬರು, "ನಾನು ದೇವರಿಗೆ ಪ್ರಾರ್ಥನೆ ಮಾಡುವಾಗಲೆಲ್ಲಾ, ನಿನ್ನಲ್ಲಿರುವ ನಂಬಿಕೆ, ಪ್ರೀತಿಗಾಗಿ, ನಿನಗಾಗಿ ಪರಲೋಕದಲ್ಲಿ ಸಿದ್ಧವಾಗಿರುವ ನಿರೀಕ್ಷೆಗಾಗಿ ಮತ್ತು ನಿನ್ನ ಫಲಿಭರಿತ ಜೀವಿತಕ್ಕಾಗಿ ದೇವರಿಗೆ ಸ್ತೋತ್ರ ಮಾಡುತ್ತೇನೆ" ಎಂದು ಹೇಳಿದರೆ ಆತನಿಗೆ ಸಿಕ್ಕುವ ಪ್ರೊತ್ಸಾಹದ ಬಗ್ಗೆ ಯೋಚಿಸಿರಿ. ಆ ರೀತಿ ಭರವಸೆಯನ್ನು ನೀಡುವಿಕೆಯು ಸಹೋದರನೊಂದಿಗೆ ಒಂದು ಬಂಧವನ್ನು ಸೃಷ್ಟಿಸುವದು ಮತ್ತು ಆತನಿಗೆ ಸಂತೋಷವನ್ನುಂಟು ಮಾಡುವದು.

## ಕಾರ್ಯನಿರತ ನಂಬಿಕೆ (1:4)

ಯೇಸು ಹೀಗೆ ಕೇಳಿದನು, "ಇದಲ್ಲದೆ ನೀವು ನನ್ನನ್ನು ಸ್ವಾಮೀ ಸ್ವಾಮೀ ಅಂತ ಕರೆದು ನಾನು ಹೇಳುವದನ್ನು ನಡಿಸದೆ ಇರುವದೇಕೆ?" (ಲೂಕ 6:46). ಆತನನ್ನು ಕರ್ತನೆಂದು ಮನ್ನಣೆ ಮಾಡಿದರೆ ಮಾತ್ರವೇ ಸಾಕಾಗುವದಿಲ್ಲ. ನಂಬಿಕೆಯು ಒಬ್ಬ ವ್ಯಕ್ತಿಯನ್ನು ತಾನು ಯಾರನ್ನು ವಿಶ್ವಾಸಿಸುತ್ತಾನೋ ಆತನ ಚಿತ್ತಕ್ಕೆ ಪ್ರತಿಕ್ರಿಯೆ ತೋರಿಸುವಂತೆ ನಡಿಸುತ್ತದೆ.

1. *ನಂಬಿಕೆಯಿಂದ ಪ್ರೇರಣೆಗೊಂಡ ಕ್ರಿಯೆಗಳು*. ನಂಬಿಕೆಯ ಪ್ರೇರಣಾತ್ಮಕ ಸ್ವಭಾವದ ಬಗ್ಗೆ ಇಬ್ರಿಯ 11ನೇ ಅಧ್ಯಾಯವು ಹಲವಾರು ಉದಾಹರಣೆಗಳನ್ನು ನೀಡುತ್ತದೆ: ಹೇಬೆಲನು ಅಂಗೀಕಾರರ್ಹವಾದ ಯಜ್ಞವನ್ನು ಅರ್ಪಿಸಿದಮಿ (ವ. 4); ನೋಹನು ಒಂದು ನೌಕೆಯನ್ನು ಕಟ್ಟಿದನು (ವ. 7); ಅಬ್ರಹಾಮನು ದೇವರು ತೋರಿಸುವ ದೇಶಕ್ಕೆ ಹೋಗುವದಕ್ಕೆ ತನ್ನ ಸ್ವದೇಶವನ್ನು ತೊರೆದನು (ವ. 8); ಇಸ್ರಾಯೇಲ್ಯರು ಯೆರಿಕೋ ಸುತ್ತಲು ಸುತ್ತಿದರು (ವ. 30); ಮತ್ತು ರಾಹಾಬಳು ಇಸ್ರಾಯೇಲ್ಯ ಗೂಢಚಾರರಿಗೆ ಸಹಾಯ ಮಾಡಿದಳು (ವ. 31). ಅಬ್ರಹಾಮನ ಕ್ರಿಯೆಗಳಿಂದ, ಆತನ "ನಂಬಿಕೆಯು . . . ಸಿದ್ಧಿಗೆ ಬಂದಿತು" (ಯಾಕೋಬ 2:22). ಆತನು ಕಾರ್ಯಪ್ರವೃತ್ತನಾಗುವ ವರೆಗೂ ಆತನ ನಂಬಿಕೆಯು ಪೂರ್ಣಗೊಂಡಿರಲಿಲ್ಲ, ಅಥವಾ "ಸಿದ್ಧಿಗೆ" ಬಂದಿರಲಿಲ್ಲ. ನಂಬಿಕೆಯು ಬಲವಾದ ಪ್ರೇರಣಾಶಕ್ತಿಯಾಗಿದ್ದು ನಾವು ದೇವರ ಚಿತ್ತಕ್ಕೆ ಪ್ರತಿಕ್ರಿಯೆ ತೋರುವಂತೆ ಕಾರಣವಾಗುತ್ತದೆ.

2. *ಕ್ರಿಯೆಗಳು ಸಜೀವವಾಗಿರುವ ನಂಬಿಕೆಗೆ ಸೂಚನೆಯಂತಿರುತ್ತದೆ*. ಕ್ರಿಯೆಗಳಿಲ್ಲದೆ ನಂಬಿಕೆಯು ಸತ್ತದ್ದು ಮತ್ತು ಪ್ರಯೋಜನವಿಲ್ಲದ್ದು ಎಂದು ಯಾಕೋಬನು ಬರೆಯುತ್ತಾನೆ (ಯಾಕೋಬ 2:17, 20, 24, 26). ಒಂದು ನಾಯಿಯು ಸತ್ತರೂ ಅದು ಆಗಲೂ ನಾಯಿಯೇ ಆಗಿರುತ್ತದೆ; ಆದರೆ ಅದು ಸತ್ತಿರುವದಾದರೆ, ಕ್ರಿಯೆ ಮಾಡಲಾರದು. ನಂಬಿಕೆಯ ವಿಷಯದಲ್ಲಿ ಸಹ ಅದು ಸತ್ಯವಾಗಿರುತ್ತದೆ. ಒಂದು ಹುರುಪಿನಿಂದ ಕೂಡಿದ ಮತ್ತು ಜೀವವುಳ್ಳ ನಂಬಿಕೆಯು ಕ್ರಿಯೆಯನ್ನು ಒಳಗೊಂಡಿರುತ್ತದೆ.

3. *ದೇವರ ಸಂದೇಶಕ್ಕೆ ಪ್ರತ್ಯುತ್ತರವಾಗಿ ಕ್ರಿಯೆಗಳು*. ದೇವರು ಒಂದು ನಿಗೂಢವಾದ

ಭಾವ ಅಥವಾ ಪವಿತ್ರಾತ್ಮನ ನೇರವಾದ ಕಾರ್ಯದ ಮೂಲಕ ಮಾನವನ ಹೃದಯದಲ್ಲಿ ನೇರವಾಗಿ ಇಡುವದಿಲ್ಲ. ದೇವರ ಸಂದೇಶಕ್ಕೆ ಸರಿಯಾದ ಪ್ರತಿಕ್ರಿಯೆ ತೋರುವ ಮೂಲಕ ನಂಬಿಕೆಯು ಬರುತ್ತದೆ ಎಂದು ಬೈಬಲ್ ಹೇಳುತ್ತದೆ: "ಆದಕಾರಣ ಸಾರಿದ ಸುವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ" (ರೋಮಾ 10:17). ನಂಬಿಕೆಯನ್ನು ಹುಟ್ಟಿಸುವಿಕೆಯಲ್ಲಿ ದೇವರ ಪಾತ್ರವೆಂದರೆ ತನ್ನ ವಾಕ್ಯವನ್ನು ವರದಾನವಾಗಿ ನೀಡಿದ್ದು. ಮನುಷ್ಯನ ಪಾತ್ರವು ಅದನ್ನು ವಾಕ್ಯವನ್ನು ಸ್ವೀಕರಿಸಿಕೊಳ್ಳುವದೇ ಆಗಿದೆ. ಯೇಸುವಿನ ಅದ್ಭುತಗಳ ಬಗ್ಗೆ ಬರೆಯಲ್ಪಟ್ಟಿರುವದರ ಉದ್ದೇಶವು ಜನರು ಅವುಗಳ ಬಗ್ಗೆ ತಿಳುಕೊಂಡು ಯೇಸುವಿನಲ್ಲಿ ನಂಬಿಕೆಯಿಡುವ ಮೂಲಕ ನಿತ್ಯಜೀವವನ್ನು ಪಡೆದುಕೊಳ್ಳಬೇಕೆಂಬುದೆ (ಯೋಹಾನ 20:30, 31). ಸುವಾರ್ತೆಯು ಸಾರಲ್ಪಡುವದನ್ನು ಕೇಳಿದ ಬಳಿಕ, ಸಮಾರ್ಯರು ಮತ್ತು ಕೊರಿಂಥದವರು ನಂಬಿಕೆಯಿಟ್ಟರು (ಅಪೊಸ್ತಲರ ಕೃತ್ಯಗಳು 8:5, 12; 18:8). ಇದು ಎಫೆಸದವರ ವಿಷಯದಲ್ಲಿ ಸಹ ಸತ್ಯವಾಗಿತ್ತು, ಅವರು "ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿ" ನಂಬಿಕೆಯಿಟ್ಟಿದ್ದರು (ಎಫೆಸ 1:13).

### ಇತರರಿಗೆ ಬೋಧಿಸುವದು (1:6)

ಕೊಲೊಸ್ಸೆಯವರು ಸತ್ಯವನ್ನು ಕೇಳಿದ ತಕ್ಷಣದಿಂದಲೇ ಅದನ್ನು ಇತರರಿಗೆ ಬೋಧಿಸುವದಕ್ಕೆ ಆರಂಭಿಸಿದರು. ಇತರರಿಗೆ ಬೋಧಿಸುವಂತೆ ಹೊಸ ವಿಶ್ವಾಸಿಗಳಿಗೆ ಉಪದೇಶ, ತರಬೇತಿ, ಮತ್ತು ಪ್ರೋತ್ಸಾಹ ನೀಡಬೇಕಾಗಿರುತ್ತದೆ.

ಪೌಲನು ತಿಮೊಥೆಯನಿಗೆ ಹೀಗೆ ಬರೆದನು, "ನೀನು ನನ್ನಿಂದ ಅನೇಕ ಸಾಕ್ಷಿಗಳ ಮುಂದೆ ಕೇಳಿದ ಉಪದೇಶವನ್ನು ಇತರರಿಗೆ ಬೋಧಿಸ ಶಕ್ತರಾದ ನಂಬಿಗಸ್ತ ಮನುಷ್ಯರಿಗೆ ಒಪ್ಪಿಸಿಕೊಡು" (2 ತಿಮೊಥೆ 2:2). ಒಂದು ಸಮಂಜಸವಾದ ಕಾಲಾವಧಿಯ ನಂತರ, ಬೋಧಿಸುವ ಸಾಮರ್ಥ್ಯವುಳ್ಳ ಮತ್ತು ಯೇಸುವಿನ ಉಪದೇಶಗಳ ಕುರಿತ ಜ್ಞಾನದಲ್ಲಿ ಅಭಿವೃದ್ಧಿ ಹಾಗು ಪರಿಪಕ್ವಗೊಂಡಿರುವಂತಹ ನಂಬಿಗಸ್ತರಾದ ಕ್ರೈಸ್ತರು ದೇವರ ವಾಕ್ಯದ ಪರಿಣಾಮಕಾರಿ ಉಪದೇಶಕರಾಗಬಲ್ಲರು.

ಬೋಧಿಸುವ ಸಾಮರ್ಥ್ಯವುಳ್ಳವರು ತಮ್ಮ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಿಕೊಳ್ಳಬೇಕು ಎಂದು ದೇವರು ಅಪೇಕ್ಷಿಸುತ್ತಾನೆ. ಸಹೋದರರನ್ನು ಬಲಗೊಳಿಸಲು ಸಭೆಗೆ ದಕ್ಷ ಬೋಧಕರ ಅಗತ್ಯವಿರುತ್ತದೆ (ಎಫೆಸ 4:11, 12), ಮತ್ತು ಯೇಸು ಕ್ರಿಸ್ತನ ಮೂಲಕವಾದ ರಕ್ಷಣೆಯ ಕುರಿತ ಶುಭವಾರ್ತೆಯನ್ನು ಸಾರುವದಕ್ಕಾಗಿ ಲೋಕಕ್ಕೆ ಸುವಾರ್ತಿಕರ ಅಗತ್ಯವಿರುತ್ತದೆ (ರೋಮಾ 10:14, 15). ಪ್ರಥಮ ಶತಮಾನದ ಕ್ರೈಸ್ತರಿಂದ ಮಾದರಿ ತೋರಿಸಲ್ಪಟ್ಟಂತೆ, ಬೋಧಿಸುವವರಾಗುಂತೆ ಇತರರಿಗೆ ನಾವು ಬೋಧಿಸುವ ನಮೂನೆಯನ್ನು ಮುಂದುವರೆಸುವಂತಾಗಲಿ!

---

### ಅಡಿಟಿಪ್ಪಣಿಗಳು

[1]ರೋಮಾ 1:8; 1 ಕೊರಿಂಥ 1:4; ಎಫೆಸ. 1:16, 17; ಫಿಲಿಪ್ಪಿ 1:3; ಕೊಲೊಸ್ಸೆ 1:3; 1 ಥೆಸಲೋನಿಕ 1:2; 2 ಥೆಸಲೋನಿಕ 1:3; 2 ತಿಮೊಥೆ 1:3; ಫಿಲೆಮೋನ 4. [2]ನೋಡಿರಿ ರೋಮಾ 1:10; 10:1; 2 ಕೊರಿಂಥ 13:7, 9; ಎಫೆಸ 1:16; ಫಿಲಿಪ್ಪಿ 1:4, 9; ಫಿಲೆಮೋನ 4; 1 ಥೆಸಲೋನಿಕ 1:2; 2 ಥೆಸಲೋನಿಕ 1:11; 2 ತಿಮೊಥೆ 1:3.

[3]Robert G. Bratcher and Eugene A. Nida, *A Translators Handbook on Paul's Letters to the Colossians and to Philemon*, Helps for Translators (New York: United Bible Societies, 1977), 8. [4]ನೋಡಿರಿ ರೋಮಾ 5:2-5; 1 ಕೊರಿಂಥ 13:13; ಗಲಾತ್ಯ 5:5, 6; ಎಫೆಸ 4:2-5; 1 ಥೆಸಲೋನಿಕ 1:3; 5:8; ಇಬ್ರಿಯ 6:10-12; 10:22-24; 1 ಪೇತ್ರ 1:3-8, 21. ಈ ಅಭಿವಂದನೆಗಳಲ್ಲಿ ಪೌಲನ ಬಳಿಸಿದ ಇತರ ಮುಖ್ಯ ಪದಗಳೆಂದರೆ "ಸುವಾರ್ತೆ," "ಸತ್ಯ," ಮತ್ತು "ಕೃಪೆ" (ಕೊಲೊಸ್ಸೆ 1:5, 6). [5]J. B. Lightfoot, *St. Paul's Epistles to the Colossians and to Philemon*, rev. (London: Macmillan & Co., 1916), 130. [6]Herbert M. Carson, *The Epistles of Paul to the Colossians and Philemon: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1960), 30. [7]Lightfoot, 131. [8]E. K. Simpson and F. F. Bruce, *Commentary on the Epistles to the Ephesians and the Colossians*, The New International Commentary on the New Testament (Grand Rapids, Mich.: Wm. B. Eerdmans Publishing Co., 1957), 180. [9]A. T. Robertson, *A Grammar of the Greek New Testament in the Light of Historical Research* (Nashville: Broadman Press, 1934), 27. [10]R. C. Lucas, *The Message of Colossians and Philemon: Fullness and Freedom*, The Bible Speaks Today (Downers Grove, Ill.: InterVarsity Press, 1980), 29.

[11]Lightfoot, 133. [12]ಅಪೊಸ್ತಲರ ಕೃತ್ಯಗಳು 2:41; 4:4; 6:7; 8:14; 11:1; 12:24; 17:11; 19:20. [13]Carson, 33. [14]*The Greek New Testament*, 4th rev. ed., ed. Barbara Aland, Kurt Aland, Johannes Karavidopoulos, Carlo M. Martini, and Bruce M. Metzger (Stuttgart: United Bible Societies, 1998). [15]NASBಯು ಕೊಲೊಸ್ಸೆ 2:5ನ್ನು "ಆತ್ಮದಲ್ಲಿ" ಎಂದು ಅನುವಾದಿಸಿದೆ, KJVಯು "ಪವಿತ್ರಾತ್ಮದಲ್ಲಿ" ಎಂದು ಅನುವಾದಿಸುತ್ತದೆ. [16]William Hendriksen, *Exposition of Colossians and Philemon*, New Testament Commentary (Grand Rapids, Mich.: Baker Book House, 1964), 54. [17]Alexander Campbell, George Campbell, James Macknight, and Philip Doddridge, *The Sacred Writings of the Apostles and Evangelists of Jesus Christ: Commonly Styled the New Testament* (Buffaloe, Va.: A. Campbell, 1826; reprint, Nashville: Gospel Advocate Co., 1974), 359; and J. B. Rotherham, *The Emphasized New Testament: A New Translation*, in *The Word, the Bible from 26 Translations*, ed. Curtis Vaughan (Gulfport, Miss.: Mathis Publishers, 1991), 2394. [18]Hugh J. Schonfield, *The Authentic New Testament* (New York: New American Library of World Literature, 1954), 331.